# ಸದ್ಗುರುವಿನ ಅನುಗ್ರಹ

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

1999

ಅಧ್ಯಾತ್ಮಗ್ರಂಥಾವಳಿ

# ಸದ್ಗುರುವಿನ ಅನುಗ್ರಹ

ಬರೆದವರು :

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೬೦

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ

1999

# ಮುನ್ನುಡಿ

ಬ್ರಹ್ಮೀಭೂತ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ರಚಿಸಿರುವ ಸರಳ-ಸುಲಭ-ವೇದಾಂತಗ್ರಂಥಗಳಲ್ಲಿ ಇದೂ ಒಂದು ಕೃತಿಯಾಗಿದೆ. ಆಕಾರದಲ್ಲಿ ಚಿಕ್ಕದಾದರೂ ಪ್ರಾರಂಭದ ಓದುಗರಿಗೆ ಹಾಗೂ ಗುರುಭಕ್ತರಿಗೆ ಅನೇಕ ವಿಷಯಗಳನ್ನು ಆತ್ಮೀಯರೀತಿಯಿಂದ ಪರಿಚಯಮಾಡಿಕೊಡುವ ಈ ಗ್ರಂಥವು ನಿತ್ಯನೂತನವಾದ ವಿಚಾರಗಳಿಂದ ಕೂಡಿದೆ.

ಪೂಜ್ಯ ಶ್ರೀಗಳವರ ಕೃತಿಗಳಲ್ಲಿ ಸಾಧಕರಿಗೆ ಹೆಚ್ಚು ಉಪಯುಕ್ತವಾಗುವಂಥ ಈ ಪುಸ್ತಿಕೆಯು ಗುರುಸಂಪ್ರದಾಯದ ಮಹತ್ತ್ವವನ್ನೂ ಗುರುಗಳಲ್ಲಿ ಶಿಷ್ಯರು ಪಡೆಯಬೇಕಾದ ಪರಮಪುರುಷಾರ್ಥದ ಬಗೆಯನ್ನೂ ವಿವರವಾಗಿ ತಿಳಿಸುತ್ತದೆ. ಸಾಧನಪ್ರಧಾನವಾದ ಈ ಪ್ರಕರಣವು ವೇದಾಂತವಿಚಾರದ ಹಾದಿಯಲ್ಲಿ ಸಾಗುವವರಿಗೆ ಅತ್ಯುಪಯುಕ್ತವಾಗಿದೆಯೆಂಬುದನ್ನು ಮನಗಂಡು ನಾಲ್ಕನೆಯ ಬಾರಿಗೆ ಪುನರ್ಮುದ್ರಣಮಾಡಿಸಿ ವಾಚಕರಿಗೆ ಅರ್ಪಿಸಲಾಗಿದೆ.

**25-4-1999** ಇತಿ-

ಹೊಳೆನರಸೀಪುರ, **ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,**

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# " ಗುರುಮಹಿಮೆ "

**ಗಂಗಾ ಪಾಪಂ ಶಶೀ ತಾಪಂ ದೈನ್ಯಂ ಕಲ್ಪತರುರ್ಹರೇತ್ ।**
**ಪಾಪಂ ತಾಪಂ ಚ ದೈನ್ಯಂ ಚ ಸದ್ಯಃ ಶ್ರೀಗುರುದರ್ಶನಮ್ ॥**

ಗಂಗೆಯು ಪಾಪವನ್ನು, ಚಂದ್ರನು ಸೆಕೆಯನ್ನು, ಕಲ್ಪತರುವು ದಾರಿದ್ರ್ಯವನ್ನು ಪರಿಹಾರಮಾಡುವವು. ಆದರೆ ಗುರುವಿನ ದರ್ಶನವಾದರೊ, ಪಾಪ-ತಾಪ-ದೈನ್ಯಗಳೆಲ್ಲ ವನ್ನೂ ಒಮ್ಮೆಗೇ ಕೂಡಲೆ ಪರಿಹರಿಸಿಬಿಡುವದು.

**ಸರ್ವತೀರ್ಥಾನಿ ಸಂತಿ ಶ್ರೀಗುರುಪಾದ ಇತಿ ಶ್ರುತಿಃ ।**
**ಶಾಸ್ತ್ರಾಣಾಮಪಿ ಸಿದ್ಧಾಂತ ಏಷ ಏವ ಸುನಿಶ್ಚಿತಃ ॥**

ಶ್ರೀಗುರುವಿನ ಪಾದಗಳಲ್ಲಿ ಎಲ್ಲಾ ತೀರ್ಥಗಳೂ ಇದ್ದುಕೊಂಡಿರುವವು-ಎಂದು ಶ್ರುತಿಯೂ ಎಲ್ಲಾ ಶಾಸ್ತ್ರಗಳೂ ನಿರ್ಣಯಿಸಿ ಹೇಳುತ್ತಿವೆ. ಇದೇ ನಿಜವು.

**ತೋಷಿತೇ ಸದ್ಗುರೌ ಚಾಷ್ಟಸಿದ್ಧಯೋ ಯಾಂತಿ ವಶ್ಯತಾಮ್ ।**
**ವೇದಶಾಸ್ತ್ರಾದಿಕಂ ಸರ್ವಂ ಸುಲಭಂ ಕ್ಷಣಮಾತ್ರತಃ ॥**

ಸದ್ಗುರುವು ಸಂತುಷ್ಟನಾಗಲಾಗಿ ಅಷ್ಟಸಿದ್ಧಿಗಳೂ ಸ್ವಾಧೀನವಾಗುವವು. ಕ್ಷಣ ಮಾತ್ರದಲ್ಲಿ ವೇದಶಾಸ್ತ್ರಗಳೆಲ್ಲವೂ ಸುಲಭವಾಗಿ ವಶವಾಗುವವು.

**ಗುರುದ್ರೋಹಿನರಸ್ಯೇಹ ಸುಖಂ ನಾಪಿ ಪರತ್ರ ಚ ।**
**ಕುತೋ ಜ್ಞಾನಂ ಭವೇತ್ತಸ್ಯ ಯೋಽಜ್ಞಾನಧ್ವಾಂತಸಂವೃತಃ ॥**

ಗುರುದ್ರೋಹಿಯಾದ ಮನುಷ್ಯನಿಗೆ ಇಹಪರಲೋಕಗಳ ಸುಖಗಳು ದೊರಕುವದಿಲ್ಲ. ಯಾವನು ಅಜ್ಞಾನವೆಂಬ ಕತ್ತಲೆಯಿಂದ ಆವರಿಸಲ್ಪಟ್ಟಿರುವನೋ ಅವನಿಗೆ ಇನ್ನು ಜ್ಞಾನವಾದರೂ ಎಲ್ಲಿಯದು?

**ಪಶ್ಚಾತ್ತಾಪೋ ಭವೇದ್ಯಸ್ಯ ತಸ್ಯ ಪಾಪಂ ಪ್ರಣಶ್ಯತಿ ।**
**ಶ್ರೀ ಗುರುಸ್ಮರಣಾಚ್ಚಾಪಿ ಸಾಮಾನ್ಯದುರಿತಕ್ಷಯಃ ॥**

ಯಾವನಿಗೆ ತಾನು ಪಾಪವನ್ನು ಮಾಡಿಬಿಟ್ಟೆನಲ್ಲ-ಎಂಬ ಪಶ್ಚಾತ್ತಾಪ ವುಂಟಾಗುವದೋ ಅಂಥವನ ಪಾಪವು ನಾಶವಾಗುವದು. ಮತ್ತು ಶ್ರೀಗುರುವಿನ ಸ್ಮರಣೆಯೂ ಕೂಡ ಸಾಮಾನ್ಯವಾದ ಪಾಪಗಳನ್ನೆಲ್ಲ ನಾಶಗೊಳಿಸುವದು.

॥ ಓಮ್ ॥

# ಸದ್ಗುರುವಿನ ಅನುಗ್ರಹ

**ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।**
**ಗುರುಃ ಸಾಕ್ಷಾತ್ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥**

೧

ಈ ಶ್ಲೋಕದಲ್ಲಿ ಸದ್ಗುರುವಿನಿಂದ ಶಿಷ್ಯರಿಗೆ ಆಗುವ ಅನುಗ್ರಹದ ಸ್ವರೂಪವನ್ನು ಸಂಗ್ರಹವಾಗಿ ತಿಳಿಸಿರುತ್ತದೆ. ಸದ್ಗುರುವು ಶಿಷ್ಯನಿಗೆ ಮುಖ್ಯವಾಗಿ ಗ್ರಂಥಿಭೇದ, ಶಕ್ತಿಪಾತ-ಎಂಬ ಎರಡು ಬಗೆಯ ಪರಮಾನುಗ್ರಹವನ್ನು ಮಾಡುತ್ತಾನೆ. ಪ್ರಪಂಚಕ್ಕೂ ಸಂಸಾರಿಗಳಿಗೂ ಬಿದ್ದಿರುವ ಮನಸ್ಸಿನ ಗಂಟಿಗೆ **ಗ್ರಂಥಿ**ಯೆಂದು ಹೆಸರು. ವಿಷಯಗಳಲ್ಲಿಯೂ ದೇಹೇಂದ್ರಿಯಗಳಲ್ಲಿಯೂ ಹೆಚ್ಚಿನ ಮಮತೆಯಿಂದ ಅವುಗಳಿಗೆ ಮನಸ್ಸನ್ನು ಗಂಟುಬೀಳಿಸಿಕೊಂಡು ನರಳುತ್ತಿರುವವರನ್ನು ಕಂಡು ಕನಿಕರದಿಂದ ಸದ್ಗುರುವು ಆ ಗಂಟನ್ನು ಬಿಚ್ಚಿಕೊಳ್ಳುವ ಉಪಾಯವನ್ನು ಅನುಗ್ರಹಿಸುತ್ತಾನೆ. ಇದೇ **ಗ್ರಂಥಿಭೇದವು.** ಶಿಷ್ಯನ ಅಜ್ಞಾನವನ್ನು ಕಳೆದು ಆ ಮೂಲಕವಾಗಿ ಕಾಮಕರ್ಮಗಳ ಕಟ್ಟನ್ನು ಕಳಚುವದೇ ಗ್ರಂಥಿಭೇದವೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಗ್ರಂಥಿಭೇದವನ್ನು ಶಿಷ್ಯನು ತನ್ನ ಅಲ್ಪಶಕ್ತಿಯಿಂದಲೇ ಮಾಡಿಕೊಳ್ಳುವದು ಆಗಲಾರದು; ಪರಮಾನಂದ ಸ್ವರೂಪನಾದ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಂಡಿರುವ ಮಹಾತ್ಮರುಗಳು ತಮ್ಮಲ್ಲಿರುವ ದಿವ್ಯತರವಾದ ಶಕ್ತಿಯನ್ನು ಶಿಷ್ಯನಲ್ಲಿ ಹಾಕಿ ಅದನ್ನು ಬೆಳಸಿಕೊಳ್ಳುವದಕ್ಕೆ ತಕ್ಕ ಉಪಾಯಗಳನ್ನು ಹೇಳಿಕೊಡುತ್ತಾರೆ. ಇದೇ **ಶಕ್ತಿಪಾತ**ವೆಂಬ ಅನುಗ್ರಹವು. ಹೀಗೆ ಶಿಷ್ಯನಲ್ಲಿರುವ ಅಶುಭವಾಸನೆಯನ್ನು ರುದ್ರನಂತೆ ಸಂಹರಿಸಿ, ಅವನಲ್ಲಿ ಮೊದಲು ತೋರಿಕೊಳ್ಳದೆ ಇದ್ದ ಶುಭವಾಸನೆಯನ್ನು ಬ್ರಹ್ಮನಂತೆ ಸೃಷ್ಟಿಸಿ, ಮುಂದೆ ಅವನು ಸಾತ್ತ್ವಿಕವಾದ ಅಧ್ಯಾತ್ಮಮಾರ್ಗದಲ್ಲಿಯೇ ನಡೆಯುವಂತೆ ಮಾಡುವದರಿಂದ ಗುರುವು ಮೂರ್ತಿತ್ರಯಾತ್ಮಕನಾಗಿರುತ್ತಾನೆ. ಕಟ್ಟಕಡೆಗೆ ಗುರುಶಿಷ್ಯರೆಂಬ ಭೇದವನ್ನು ಕೂಡ ಅಳಿಸಿಹಾಕಿ ತನ್ನ ಪರಮಾನಂದಸ್ವರೂಪದಲ್ಲಿ ಶಿಷ್ಯನನ್ನು ಒಂದುಮಾಡಿಕೊಂಡು ಬಿಡುವದರಿಂದ

ಆತನು ಶಿಷ್ಯನ ಆತ್ಮನಾದ **ಪರಬ್ರಹ್ಮ**ವೇ ಎಂದು ಶ್ಲೋಕದಲ್ಲಿ ಉಪಸಂಹಾರ ಮಾಡಿರುತ್ತದೆ.

೨

ಮೇಲೆ ವಿವರಿಸಿರುವ ಅನುಗ್ರಹವನ್ನು ಮಾಡಬಲ್ಲ ಗುರುವಿಗೆ ಮಾತ್ರ **ಶ್ರೀಗುರು** ಅಥವಾ **ಸದ್ಗುರು**-ಎಂದು ಹೆಸರು. ಮಿಕ್ಕವರು ಬರಿಯ ಗುರುಗಳೆನಿಸುವರು. ಯಾವನು ಶಿಷ್ಯನಿಗೆ ಹಿತವನ್ನು ಹೇಳಿಕೊಡುವನೋ ಅವನು **ಗುರು** ಎನಿಸುವನು. ಈ ಅರ್ಥದಲ್ಲಿ ತಂದೆ, ತಾಯಿ, ಬಂಧುಬಳಗ-ಮುಂತಾದ ಹಿರಿಯರೆಲ್ಲರೂ ನಮಗೆ ಗುರುಗಳೇ ಆಗಿರುತ್ತಾರೆ. ಹಿತವಚನಗಳನ್ನು ಪುಸ್ತಕದಲ್ಲಿ ಬರೆದಿಟ್ಟಿರುವವರು, ಅದನ್ನು ಓದಿಕೊಳ್ಳುವದಕ್ಕೆ ಅನುಕೂಲವಾಗುವಂತೆ ಓದು ಬರಹವನ್ನು ಕಲಿಸಿಕೊಡುವವರು- ಇವರೂ ಗುರುಗಳೇ ಆಗಿರುತ್ತಾರೆ. ಗುರುವು ನಮಗೆ ಈಗ್ಗೆ ಪ್ರಿಯವಾಗಿರುವದನ್ನು ಮಾತ್ರ ತಿಳಿಸಿಕೊಡುವದಿಲ್ಲ, ಈಗಲೂ ಮುಂದೆಯೂ ಹಿತವಾಗಿರುವದನ್ನೇ ಹೇಳಿಕೊಡುತ್ತಾನೆ. ಈ ಹಿತವು ನಮ್ಮ ಶರೀರ, ಮನಸ್ಸು, ಬುದ್ಧಿ- ಈ ಎಲ್ಲದರ ಏಳಿಗೆಗೂ ಕಾರಣವಾಗಿದ್ದರೆ ಗುರುವಿನ ಅಂತಸ್ತು ಹೆಚ್ಚಿನದಾಗಿರುತ್ತದೆ; ಬರಿಯ ಶರೀರಕ್ಕೆ ಸಂಬಂಧಪಟ್ಟದ್ದಾಗಿದ್ದರೆ ಅವನ ಅಂತಸ್ತು ಕಡಿಮೆಯದಾಗಿರುತ್ತದೆ.

ಈ ದೃಷ್ಟಿಯಿಂದ ನೋಡಿದರೆ ಈ ಜನ್ಮದಲ್ಲಿ ಮಾತ್ರ ನಮ್ಮ ಹಿತವನ್ನು ಸಾಧಿಸುವ ಉಪಾಯವನ್ನು ಬೋಧಿಸುವ ಗುರುವಿಗಿಂತಲೂ ಮುಂದಿನ ಜನ್ಮದಲ್ಲಿಯೂ ನಮಗೆ ಹಿತಕರವಾಗಿರುವ ದಾರಿಯನ್ನು ಉಪದೇಶಿಸುವಾತನು ಹೆಚ್ಚಿನ ಗುರುವೆನಿಸುತ್ತಾನೆ. ಈ ಜನ್ಮದಲ್ಲಿ ನಮ್ಮನ್ನು ಹಿಂಬಾಲಿಸಿಕೊಂಡು ಬಂದಿರುವ ನಮ್ಮ ಶರೀರ, ಶರೀರದ ಅನುಬಂಧಿಗಳಾದ ಹೆಂಡಿರು ಮಕ್ಕಳು, ನೆಂಟರು, ಇಷ್ಟರು- ಎಲ್ಲರಿಗೂ ಹಿತವಾಗುವ ಹಾದಿಯನ್ನು ಹೇಳಿಕೊಡುವ **ಲೌಕಿಕಗುರು**ವಿಗಿಂತಲೂ ಮುಂದೆ ಯಾವ ಯಾವ ಅನುಬಂಧಿಗಳು ಬಂದರೂ ಎಲ್ಲರಿಗೂ ಹಿತವಾಗುವಂತೆ ನಡೆಯುವ ಹೆದ್ದಾರಿಯನ್ನುಪದೇಶಿಸುವ **ಧಾರ್ಮಿಕ ಗುರುವು** ಹೆಚ್ಚಿನವನಾಗಿರುತ್ತಾನೆ.

ಗುರುಗಳೆಲ್ಲರೂ ನಮಗೆ ಪೂಜ್ಯರೇ. ಅವರೆಲ್ಲರಿಗೂ ನಾವು ಕೃತಜ್ಞರಾಗಿಯೇ ಇರಬೇಕು. ಹೆಚ್ಚಿನ ಗುರುವಿನಲ್ಲಿ ವಿಶ್ವಾಸವುಂಟಾಗುವದಕ್ಕೆ ಕಡಿಮೆಯ ಗುರುವೇ ಕಾರಣನಾಗಿರುವದರಿಂದ ಅವನನ್ನು ನಾವು ಎಂದಿಗೂ ಕಡೆಗಣಿಸುವದಕ್ಕೆ

ಆಗುವಹಾಗಿರುವದಿಲ್ಲ. ಆದರೆ ಗುರುಗಳ ಅಂತಸ್ತು ಹೆಚ್ಚಿದಂತೆಲ್ಲ ನಮಗೆ ಅವರಲ್ಲಿ ವಿಶ್ವಾಸವೂ ಆದರವೂ ಪ್ರೇಮವೂ ಸಹಜವಾಗಿಯೇ ಹೆಚ್ಚುತ್ತಾ ಹೋಗುತ್ತದೆ.

೩

ಹೀಗೆ ನೋಡುತ್ತಾ ಹೋದರೆ ಯಾವ ಗುರುವು ನಮ್ಮ ಜೊತೆಯಲ್ಲಿಯೇ ಯಾವಾಗಲೂ ಇದ್ದುಕೊಂಡಿರುವನೋ, ಯಾವನು ಯಾವ ಯಾವಾಗ ನಮಗೆ ಯಾವ ಯಾವ ಬುದ್ಧಿವಾದವು ಅವಶ್ಯವಾದರೆ ಅದನ್ನು ಆಗಾಗಲೇ ಬೋಧಿಸಿ ನಮ್ಮ ಹಿತವನ್ನು ಸಾಧಿಸುವನೋ ಅವನು ಗುರುಗಳಲ್ಲೆಲ್ಲ ಹೆಚ್ಚಿನವನಾದ ಪರಮ ಗುರುವಾಗುವನು. ಇಂಥ ಪರಮಗುರುವಿನಲ್ಲಿ ನಮಗೆ ಯಾವಾಗಲೂ ಪೂಜ್ಯ ಬುದ್ಧಿಯು ಕಡಿಮೆಯಾಗಲಾರದು; ಆತನ ಸ್ವಭಾವವನ್ನು ನಾವು ಎಷ್ಟೆಷ್ಟು ಅರಿತುಕೊಂಡರೆ ಅಷ್ಟಷ್ಟು ಅವನಲ್ಲಿ ಹೆಚ್ಚಿನ ಗೌರವಬುದ್ಧಿಯುಂಟಾಗುವದು. ಸಕಲ ಸಮಯಗಳಲ್ಲಿಯೂ ಸಕಲ ಅವಸ್ಥೆಗಳಲ್ಲಿಯೂ ಸಕಲ ಜನ್ಮಗಳಲ್ಲಿಯೂ ಸಕಲ ಲೋಕಗಳಲ್ಲಿಯೂ ನಮ್ಮ ಜೊತೆಯಲ್ಲಿ ಹೀಗೆ ಇದ್ದುಕೊಂಡು ನಮ್ಮ ಹಿತವನ್ನು ತೋರಬಲ್ಲ ಗುರುವು ಯಾವನಿರುವನು? ಮನುಷ್ಯಯಕ್ಷಗಂಧರ್ವರೇ ಮೊದಲಾದವರಲ್ಲಿ ಯಾರಿಗೂ ಅಂಥ ಗುರುವಾಗಿರಲು ಸಾಧ್ಯವಿಲ್ಲ. ಏಕೆಂದರೆ ಇವರೆಲ್ಲರೂ ದೇಶಕಾಲಗಳ ಅಳತೆಗೆ ಸಿಕ್ಕಿಬಿದ್ದಿರುತ್ತಾರೆ, ಅವರ ಜ್ಞಾನವೂ ಅಳತೆಗೆ ಸಿಕ್ಕಿ ಬಿದ್ದಿರುತ್ತದೆ. ಆದ್ದರಿಂದ ಅವರಿಗೆ ನಮ್ಮ ಎಲ್ಲಾ ಅವಸ್ಥೆಗಳಲ್ಲಿಯೂ ಇದ್ದುಕೊಂಡು ನಮ್ಮ ಹಿತವನ್ನೇ ಸಾಧಿಸುವ ಇಚ್ಛೆಯಾಗಲಿ, ಜ್ಞಾನವಾಗಲಿ, ಶಕ್ತಿಯಾಗಲಿ ಇರುವ ಸಂಭವವೇ ಇಲ್ಲ. ಈ ಅರ್ಥದಲ್ಲಿ ನಮಗೆಲ್ಲ ಒಬ್ಬನೇ ಒಬ್ಬನು **ಪರಮಗುರು** ವಾಗಿರಬಲ್ಲವನು; ಅವನೇ **ಪರಮೇಶ್ವರನು.**

ಗುರುವಿನ ಗುರುವಾದ ಹಿರಿಯ ಗುರುವನ್ನೂ **ಪರಮಗುರು**ವೆಂದು ಕರೆಯುವದುಂಟು. ಆದರೆ ಆ ಪರಮಗುರುವಿಗಿಂತಲೂ ಹಿರಿಯವನಾದ 'ಪರಾತ್ಪರಗುರು'ವೊಬ್ಬನು ಇದ್ದೇ ಇರುತ್ತಾನೆ. ಇನ್ನಿಲ್ಲವೆಂಬಷ್ಟು ಹಿಂದಕ್ಕೆ ಹೋಗಿ ಯಾವ ಗುರುವನ್ನು ತೆಗೆದುಕೊಂಡರೂ ಆ ಗುರುವಿಗೂ ಮತ್ತೊಬ್ಬ ಗುರುವು ಇದ್ದೇ ಇದ್ದನೆಂದು ಏರ್ಪಡುತ್ತದೆ. ಹಿಂದಿನ, ಈಗಿನ, ಮುಂದಿನ ಗುರುಗಳಿಗೆಲ್ಲ ಗುರುವಾಗಿ; ಯಾವ ಕಾಲದ ಕಟ್ಟೂ ಇಲ್ಲದ ಗುರುವೆಂದರೆ ಪರಮೇಶ್ವರನೊಬ್ಬನೇ

ಆಗಿರುತ್ತಾನೆ. ನಿಜವಾಗಿ ಆತನೇ **ಆದಿಗುರು.** ಆದ್ದರಿಂದಲೇ ಪಾತಂಜಲ ಸೂತ್ರದಲ್ಲಿ **"ಪೂರ್ವೇಷಾಮಪಿ ಗುರುಃ ಕಾಲೇನಾನ ವಚ್ಛೇದಾತ್"** (ಆತನು ಹಿಂದಿನ ವರಿಗೂ ಗುರುವು, ಏಕೆಂದರೆ ಆತನಿಗೆ ಕಾಲದ ಕಟ್ಟು ಇರುವದಿಲ್ಲ) ಎಂದು ಹೇಳಿ ರುತ್ತದೆ. ಆ ಪರಮೇಶ್ವರನ ಇಚ್ಛೆಗಾಗಲಿ ಜ್ಞಾನಕ್ಕಾಗಲ ಶಕ್ತಿಗಾಗಲಿ ದಯೆಗಾಗಲಿ ಇಷ್ಟೆಂಬ ಅಳತೆಯಿರುವದಿಲ್ಲ. ಆದ್ದರಿಂದಲೇ ಎಲ್ಲಾ ಧರ್ಮಪಂಥಗಳಲ್ಲಿಯೂ ಹಿಂದಿನ ಪರಮಾಚಾರ್ಯರು ಗಳು ಪರಮೇಶ್ವರನ ಅನುಗ್ರಹದಿಂದಲೇ ಪರಮಾರ್ಥ ವನ್ನು ತಿಳಿದುಕೊಂಡರೆಂದು ಹೇಳಿರುತ್ತದೆ. ಅದೇ ಪರಮಾರ್ಥವನ್ನು ಗುರುಶಿಷ್ಯಪರಂಪರೆಯಿಂದ ಈಗಿನ ಗುರುಗಳು ಪಡೆದುಕೊಂಡಿರುತ್ತಾರೆಂದು ನಾವು ಭಾವಿಸುತ್ತೇವೆ.

೪

ಆದಿಗುರುವಾದ ಪರಮೇಶ್ವರನು ಅಕ್ಷರಶಃ ಸದ್ಗುರುವಾಗಿರುತ್ತಾನೆ. ಏಕೆಂದರೆ **ಸತ್** ಎಂದರೆ ಪರಮಾರ್ಥವಾಗಿರುವದು, ಮತ್ತು ಸಾಧು ರೂಪವಾಗಿರು ವದು (ಗೀತೆ. ೧೭-೨೬). ಪರಮೇಶ್ವರನು ಸದ್ರೂಪನು, ಎಂದರೆ ದೇಶಕಾಲಗಳ ಕಟ್ಟಿಲ್ಲದೆ ಎಲ್ಲೆಲ್ಲಿಯೂ ಯಾವಾಗಲೂ ಇರುವಾತನು; ಏಕೆಂದರೆ ಅವನೇ ದೇಶಕಾಲಗಳಿಗೂ ಆಧಾರವಾಗಿರುತ್ತಾನೆ. ಇದರಂತೆ ಪರಮೇಶ್ವರನು **ಸಾಧು**ವಾಗಿಯೂ ಇರುತ್ತಾನೆ, ಎಂದರೆ ಎಲ್ಲರ ಹಿತವನ್ನೂ ಬಯಸುವವನಾಗಿ ಎಲ್ಲರಿಗೂ ಹಿತವನ್ನೇ ಉಂಟು ಮಾಡುವವನಾಗಿರುತ್ತಾನೆ. ಆತನು ನಮ್ಮೆಲ್ಲರನ್ನೂ ಸೃಷ್ಟಿಸಿ ಹಿತಾಹಿತಗಳನ್ನು ತಿಳಿದು ಕೊಳ್ಳುವದಕ್ಕೂ ಆಚರಣೆಮಾಡುವದಕ್ಕೂ ತಕ್ಕ ಶರೀರವನ್ನೂ ಕರಣಗಳನ್ನೂ ಕೊಟ್ಟಿರುವದಲ್ಲದೆ ಆಗಿಂದಾಗ್ಗೆ ಸನ್ಮಾರ್ಗಕ್ಕೆ ತಿರುಗಿ ಸುವದಕ್ಕಾಗಿ ನಮ್ಮೊಳಗೆ ಅಂತರ್ಯಾಮಿಯಾಗಿ ಕುಳಿತಿರುತ್ತಾನೆ; ನಮ್ಮ ಹೊರಗೆ ನಮ್ಮ ಶ್ರೇಯಸ್ಸಿಗೆ ಬೇಕಾಗುವ ಸಚ್ಛಾಸ್ತ್ರಗಳನ್ನೂ ಅವುಗಳನ್ನು ತಿಳಿಸಿಕೊಡಬಲ್ಲ ಸಾಧುಗಳನ್ನೂ ಅಲ್ಲಲ್ಲಿ ಇಟ್ಟಿರುತ್ತಾನೆ.

ಮೂಲಗುರುವಾಗಿರುವ ಪರಮೇಶ್ವರನು ನಮ್ಮೆಲ್ಲರಿಗೂ ಹೀಗೆ ಅನುಗ್ರಹ ಮಾಡುತ್ತಿರುವನೆಂಬುದು ನಮಗೆ ಯಾವ ಸಾಧುಗಳಿಂದ ತಿಳಿದು ಬರುವದೋ ಅವರುಗಳೂ ಒಂದು ಬಗೆಯಿಂದ ಸದ್ಗುರುಗಳೆನಿಸಿಕೊಳ್ಳುತ್ತಾರೆ. ಏಕೆಂದರೆ ಅವರು ತಮ್ಮ ಅನುಭವದ ದೃಷ್ಟಿಯಿಂದ ಸದ್ರೂಪನಾದ ಪರಮಾತ್ಮನೇ ಆಗಿರುತ್ತಾರೆ. ಮತ್ತು

ವರ್ತನೆಯಿಂದ ಸಾಧುಗಳೂ ಆಗಿರುತ್ತಾರೆ. ಪರಮೇಶ್ವರನು ಸ್ವತಃ ದೇಶಕಾಲಗಳ ಕಟ್ಟಿನ ಭಯವಿಲ್ಲದವನಾಗಿರುವಂತೆ ಆತನ ಅನುಗ್ರಹದಿಂದ ತಾವು ಪಡೆದುಕೊಂಡಿರುವ ಜ್ಞಾನದಿಂದ ಈ ಸಾಧುಗಳೂ ದೇಶಕಾಲಗಳ ಕಟ್ಟಿನ ಭಯವಿಲ್ಲದವರಾಗಿರುತ್ತಾರೆ. ಪರಮೇಶ್ವರನು ಯಾವದೊಂದು ಪ್ರತಿಫಲವನ್ನೂ ಬಯಸದೆ ಸರ್ವಭೂತಗಳ ಹಿತದಲ್ಲಿಯೇ ನಿರತನಾಗಿರುವಂತೆ ಇವರೂ ಸರ್ವಪ್ರಾಣಿಗಳಿಗೂ ಹಿತವನ್ನು ಗೈಯುವವದರಲ್ಲಿಯೇ ನಿರತರಾಗಿರುತ್ತಾರೆ. ಪರಮೇಶ್ವರನು ವೇದಶಾಸ್ತ್ರಗಳ ಮೂಲಕವೂ ನಮ್ಮೊಳಗೆ ತಾನು ಇಟ್ಟಿರುವ ತನ್ನ ಸೂಕ್ಷ್ಮರೂಪದ ಸನ್ನಿಧಿಯ ಮೂಲಕವೂ ಹೇಗೆ ನಮಗೆ ತತ್ತ್ವವನ್ನು ಉಪದೇಶಮಾಡುತ್ತಿರುವನೋ ಹಾಗೆಯೇ ಅವರೂ ತಮ್ಮ ಸದುಪದೇಶಗಳ ಮೂಲಕವೂ ತಮ್ಮ ಸದಾಚಾರದ ಮೂಲಕವೂ ನಮಗೆ ಧರ್ಮಜ್ಞಾನಗಳನ್ನು ಉಪದೇಶಮಾಡುತ್ತಿರುತ್ತಾರೆ. ಆದ್ದರಿಂದ ಇಂಥವರು **ಪ್ರಕಟಸದ್ಗುರು**ಗಳಾಗಿ ರುತ್ತಾರೆನ್ನಬಹುದಾಗಿರುತ್ತದೆ.

ಒಂದು ರೀತಿಯಿಂದ ನೋಡಿದರೆ ಮೂಲಗುರುವಿಗಿಂತಲೂ ಈ ಪ್ರಕಟಸದ್ಗುರುಗಳೇ ನಮಗೆ ಹೆಚ್ಚಿನ ಪ್ರಯೋಜನವನ್ನು ಮಾಡುವವರಾಗಿರುತ್ತಾರೆನ್ನಬಹುದು. ಹೇಗೆಂದರೆ ಮೂಲಗುರುವಾದ ಪರಮೇಶ್ವರನು ಎಲ್ಲೆಲ್ಲಿಯೂ ತನ್ನ ಸಚ್ಚಿದಾನಂದರೂಪದಿಂದ ಪರಿಪೂರ್ಣನಾಗಿ ನಮ್ಮಲ್ಲಿಯೂ ಅಂತರಾತ್ಮನಾಗಿರುತ್ತಾನಾದರೂ ಆತನನ್ನು ನೇರಾಗಿ ಕಂಡುಕೊಂಡು ಅನುಭವಿಸುವದು ನಮ್ಮೆಲ್ಲರಿಗೂ ಸಾಧ್ಯವಾಗಿರುವದಿಲ್ಲ. ಪ್ರಕಟಸದ್ಗುರುಗಳು ಯಾವಾಗ ಆತನ ಶಕ್ತಿ, ಜ್ಞಾನ, ಆನಂದ- ಮುಂತಾದವುಗಳನ್ನು ತಮ್ಮ ತಿತಿಕ್ಷೆ, ಸಮತೆ, ಪ್ರೇಮ-ಮುಂತಾದ ಅಮೂಲ್ಯಸದ್ಗುಣಗಳಿಂದ ಪ್ರಕಾಶಗೊಳಿಸುತ್ತಾರೋ ಆಗಲೇ ಮೂಲಸದ್ಗುರುವಾದ ಪರಮೇಶ್ವರನ ಮಹಿಮೆಯೂ ಅಪಾರಕಾರುಣ್ಯವೂ ಜನರ ಮನಸ್ಸಿಗೆ ತಟ್ಟುವದು. ಆಗಲೇ ದುರ್ಗುಣ ದುರಾಚಾರಗಳಿಂದ ಕೂಡಿದ ಅಲ್ಪಜ್ಞರು ಕೂಡ ಸ್ಪರ್ಶಮಣಿಗೆ ಸೋಕಿಸಿದ ಕಡಿಮೆಯ ತರದ ಲೋಹದಂತೆ ಚೊಕ್ಕಚಿನ್ನವಾಗುವರು. ಈ ಕಾರಣದಿಂದ ಈ ಪ್ರಕಟಸದ್ಗುರುಗಳನ್ನೇ ಸದ್ಗುರುಗಳೆಂದು ಕರೆಯುವ ವಾಡಿಕೆಯು ಬಂದಿರುತ್ತದೆ. ಈ ಕಾರಣದಿಂದಲೇ ಈ ಸದ್ಗುರುಗಳನ್ನು ಅಷ್ಟೊಂದು ಪೂಜ್ಯಬುದ್ಧಿಯಿಂದ ಪ್ರತಿಯೊಂದು ಧರ್ಮಪಂಥದಲ್ಲಿಯೂ ಕೊಂಡಾಡಿರುತ್ತದೆ.

೫

ಪ್ರಕಟಸದ್ಗುರುಗಳೆಂಬ ಹೆಸರಿರುವದರಿಂದ ಈ ಸದ್ಗುರುಗಳೆಲ್ಲರೂ ಪ್ರಕಟವಾಗಿಯೇ ಸಂಚರಿಸುತ್ತಿದ್ದಾರೆಂದು ಭಾವಿಸಬಾರದು. ಏಕೆಂದರೆ ಪರಮೇಶ್ವರನಂತೆ ಅವರು ಅವ್ಯಕ್ತರೂಪದಿಂದ ಸರ್ವವ್ಯಾಪಕರಾಗಿರದೆ ದೇಹ ಧಾರಿಗಳಾಗಿರುವರೆಂಬರ್ಥದಲ್ಲಿ ಮಾತ್ರವೇ ಅವರು ಪ್ರಕಟಸದ್ಗುರುಗಳೆನಿಸಿ ಕೊಂಡಿರುತ್ತಾರೆ. ಆದರೂ ಇವರಲ್ಲಿಯೇ ಕೆಲವರು **ಗುಪ್ತಸದ್ಗುರು**ಗಳೂ ಉಂಟು. ಶ್ರುತಿಸ್ಮೃತಿಪುರಾಣಗಳಲ್ಲಿ ಪ್ರಸಿದ್ಧರಾಗಿರುವ ನಾರದಸನಕದತ್ತಾತ್ರೇ ಯಾದಿಗಳು ಈಗಲೂ ಲೋಕದಲ್ಲಿ ಗುಪ್ತರೂಪದಿಂದ ಸಂಚರಿಸುತ್ತಿರುವರೆಂದು ಜನರು ನಂಬುತ್ತಾರೆ; ಅಲ್ಲಲ್ಲಿ ಪ್ರಕಟವಾಗಿ ಸಂಚರಿಸುತ್ತಿರುವ ಮಹಾತ್ಮರಲ್ಲಿ ಕೆಲವರು ಈ ಗುಪ್ತಸದ್ಗುರುಗಳ ಅಂತರಂಗಭಕ್ತರೆಂದೂ ದೊಡ್ಡವರು ಹೇಳುತ್ತಾರೆ. ಆ ಗುಪ್ತಸದ್ಗುರುಗಳು ಈಗಲೂ ತಮಗೆ ಮೆಚ್ಚಾದ ಭಕ್ತರಿಗೆ ದರ್ಶನವನ್ನು ಕೊಟ್ಟು ಸದುಪದೇಶವನ್ನು ಮಾಡುವರೆಂಬ ನಂಬಿಕೆಯು ಆಸ್ತಿಕರಲ್ಲಿ ಅನೇಕರಿಗೆ ಇರುತ್ತದೆ. ಈ ವಿಷಯವನ್ನು ಒತ್ತಟ್ಟಿಗೆ ಇಟ್ಟರೂ ಮತ್ತೊಂದು ಬಗೆಯ ಗುಪ್ತಸದ್ಗುರುಗಳು ಈಗಲೂ ನಮ್ಮ ನಡುವೆಯಲ್ಲಿಯೇ ಇದ್ದುಕೊಂಡಿರುತ್ತಾರೆ. ಅವರು ತಾವು ಸದ್ಗುರುಗಳೆಂಬುದನ್ನು ಜನರಿಗೆ ತಿಳಿಯಗೊಡದೆ ಮಿಕ್ಕವರಂತೆಯೇ ಜನತೆಯ ಮಧ್ಯದಲ್ಲಿಯೇ ಬೇರೆಬೇರೆಯ ಸ್ಥಾನಗಳನ್ನು ಆಕ್ರಮಿಸಿಕೊಂಡು ಬೇರೆಬೇರೆಯ ಮಹಾಕಾರ್ಯಗಳನ್ನು ಮಾಡುತ್ತಾ ತಮ್ಮ ಆಚರಣದಿಂದಲೂ ಸದುಪದೇಶ ದಿಂದಲೂ ಲೋಕಕ್ಕೆ ಪರಮೋಪಕಾರವನ್ನು ಮಾಡುತ್ತಿರುವರು. ಇವರಲ್ಲಿ ಕೆಲವರ ಮಹಿಮೆಯು ಹೇಗೋ ಜನರಿಗೆ ಸ್ವಲ್ಪಮಟ್ಟಿಗೆ ತಿಳಿದುಬಂದಿರುತ್ತದೆ ; ಆದರೆ ಅವರು ತಾವು ಸಾಧುಗಳೆಂದಾಗಲಿ ಸದ್ಗುರುಗಳೆಂದಾಗಲಿ ಎಂದಿಗೂ ಹೇಳಿ ಕೊಳ್ಳುವದಿಲ್ಲ. ಉಳಿದ ಜನರಂತೆಯೇ ತಾವೂ ಸಾಧನಪರರಾಗಿಯೇ ಕಾಲಕ್ಷೇಪ ವನ್ನು ಮಾಡಿಕೊಂಡಿರುತ್ತಾರೆ. ಚಂದ್ರನು ಉದಯಿಸಿದ ಮಾತ್ರದಿಂದ ಭೂಲೋಕ ಕ್ಕೆಲ್ಲ ತಂಪೂ ಸಂತೋಷವೂ ಉಂಟಾಗುವಂತೆ ಇಂಥ ಮಹಾತ್ಮರ ಸಾಹಚರ್ಯದಿಂದಲೇ ಎಷ್ಟೋ ಜನರಿಗೆ ಸದಾಚಾರದಲ್ಲಿಯೂ ಸದ್ವಿಚಾರ ದಲ್ಲಿಯೂ ಅಭಿರುಚಿಯುಂಟಾಗುತ್ತದೆ, ಮನಸ್ಸೂ ಪ್ರಸನ್ನವಾಗುತ್ತದೆ.

ನಮಗೆ ಎಷ್ಟು ಜನರು ಇಂಥ ಗುಪ್ತಸದ್ಗುರುಗಳು ಅಲ್ಪಸ್ವಲ್ಪವಾಗಿ ಯಾದರೂ ತಿಳಿದುಬಂದಿರುವರೋ ಅಷ್ಟೇ ಜನರು ಈ ಲೋಕದಲ್ಲಿರುವರೆಂದು

ಎಂದಿಗೂ ಭಾವಿಸಬಾರದು. ಇಪ್ಪತ್ತೇಳು ನಕ್ಷತ್ರಗಳ ಹೆಸರು ಮಾತ್ರ ನಮಗೆ ತಿಳಿದಿದ್ದರೂ ಖಗೋಳದಲ್ಲಿ ಅನಂತಸಂಖ್ಯೆಯ ನಕ್ಷತ್ರಗಳು ಇರುವದು ಹೇಗೆ ನಿಶ್ಚಯವೋ ಅದರಂತೆ ಒಟ್ಟು ಸದ್ಗುರುಮಂಡಲಿಯಲ್ಲಿ ನಿಮಗೆ ತಿಳಿದು ಬಂದಿರುವವರು ಕೆಲವರೇ ಆಗಿರುತ್ತಾರೆ, ನಮಗೆ ಗೋಚರವಾಗದೆ ಇರುವ ಮಹಾಮಹಿಮರೇ ಬಹು ಸಂಖ್ಯೆಯಾಗಿರುತ್ತಾರೆಂಬುದು ನಿಶ್ಚಯ. ಏಕೆಂದರೆ ಜನರಿಗೆ ತಿಳಿಯಗೊಡದಂತೆ ತಮ್ಮ ಸದಾಚಾರವನ್ನು ಕಾಪಾಡಿಕೊಂಡು ಲೋಕಾನುಗ್ರಹವನ್ನು ಮಾಡುತ್ತಿರುವದೇ ಸಾಧುಗಳಿಗೆ ಹೆಚ್ಚು ಪ್ರಿಯವಾಗಿರುತ್ತದೆ. ಆದ್ದರಿಂದ ಸಾಧುತ್ವವು ಹೆಚ್ಚಿದಂತೆಲ್ಲ ಅವರ ಪ್ರಾಕಟ್ಯವು ಕಡಿಮೆ ಯಾಗಿರುವದೆಂದು ಹೇಳುವದೇ ಹೆಚ್ಚು ಒಪ್ಪುತ್ತದೆ; ಇದೇ ಕಾರಣ ದಿಂದ ಲೋಕದಲ್ಲಿ ಸಾಧುಗಳೆಂದು ಪ್ರಸಿದ್ಧರಾಗಿರುವವರಲ್ಲಿ ಕೆಲವರು ನಿಜವಾಗಿ ಸಾಧುಗಳಲ್ಲದೆ ಸಾಧುಗಳ ಕೀರ್ತಿಯನ್ನು ಸಂಪಾದಿಸಬೇಕೆಂಬ ತವಕದಿಂದ ಸದ್ಗುರು ಪೀಠವನ್ನಲಂಕರಿಸುವದಕ್ಕೆ ಹವಣಿಸುತ್ತಿರುವ ಅಸಾಧುಗಳಾಗಿರುವ ಸಂಭವವೂ ಉಂಟೆಂಬುದನ್ನು ನಾವು ನಂಬಬಹುದಾಗಿದೆ.

೬

ಇದು ಹೇಗಾದರೂ ಇರಲಿ. ಪರಮಾರ್ಥವನ್ನು ಕಂಡುಕೊಳ್ಳಬೇಕೆಂದು ಹಾತುವರಿಯುತ್ತಿರುವ ಸಾಧಕರು ಪ್ರಕಟಸದ್ಗುರುಗಳನ್ನೇ ಹುಡುಕುತ್ತಾರೆಂಬುದು ನಿಶ್ಚಯವು. ಯಾವಾತನು ತಮಗೆ ಪರಮಾರ್ಥವನ್ನು ಉಪದೇಶಿಸಬಲ್ಲವನೆಂದು ಅವರು ಭಾವಿಸುತ್ತಾರೋ ಅಂಥವನ ಬಳಿಗೆ ಹೋಗಿ ಅವನ ಸೇವೆಯನ್ನು ಮಾಡಿ ತಾವು ಕೃತಾರ್ಥರಾಗಬೇಕೆಂದು ಅವರು ಬಯಸುತ್ತಿರುತ್ತಾರೆ. ಪರಮಾರ್ಥವನ್ನು ಶಾಸ್ತ್ರದಲ್ಲಿ ಹುಡುಕುವದಕ್ಕಿಂತಲೂ ಸದ್ಗುರುವನ್ನು ಸೇವಿಸಿಯೇ ತಿಳಿದು ಕೊಳ್ಳುವದು ಸುಲಭವಾದ ಹಾದಿಯೆಂದು ಶ್ರುತಿಸ್ಮೃತಿಗಳು ಸಾರುತ್ತಿರುವವು. ಅದರಂತೆ ಸದ್ಗುರುವಿನ ಕೃಪೆಗೆ ಪಾತ್ರರಾಗಿ ಕೃತಾರ್ಥರಾಗಬೇಕೆಂದು ಆಸ್ತಿಕರು ಇಚ್ಛಿಸುವದು ಸಹಜವಾಗಿರುತ್ತದೆ.

ಆದ್ದರಿಂದ ಸದ್ಗುರುವಿನ ಲಕ್ಷಣಗಳು ಯಾವವು? ಈ ಅನುಗ್ರಹಕ್ಕೆ ಪಾತ್ರನಾಗುವದಕ್ಕೆ ಶಿಷ್ಯನು ಮಾಡಬೇಕಾದ ಪ್ರಯತ್ನವೇನು? ಆತನಿಂದ ಶಿಷ್ಯನಿಗೆ ಆಗುವ ಅನುಗ್ರಹವು ಯಾವ ರೂಪವಾದದ್ದು?- ಎಂಬ ಪ್ರಶ್ನೆಗಳು ಸಾಧಕರ ಮುಂದೆ ಸಹಜವಾಗಿ ಬರುವವು. ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವದ

ರಿಂದ ಮಹಾತ್ಮರ ಸೇವೆಯನ್ನು ದೊರಕಿಸಿಕೊಳ್ಳುವದು ಸುಲಭವಾಗುವದು; ಸಾಧುವೇಷಧಾರಿಗಳಾದ ಅಸತ್ಪುರುಷರನ್ನು ನಂಬಿ ಪರಮಾರ್ಥದಿಂದ ವಂಚಿತರಾಗಿ ಅನರ್ಥಕ್ಕೀಡಾಗುವ ಅಂಜಿಕೆಯೂ ತೊಲಗುವದು.

ಈ ವಿಚಾರದಲ್ಲಿ ಮೊಟ್ಟಮೊದಲು ನಾವು ತಿಳಿದುಕೊಳ್ಳಬೇಕಾಗಿರುವದೇನೆಂದರೆ ಹೊರಗಿನ ವೇಷದಿಂದಲಾಗಲಿ ಆಚರಣೆಯಿಂದಾಗಲಿ ಇಂಥವರೇ ನಿಜವಾಗಿಯೂ ಪರಮಾರ್ಥವನ್ನು ಸಾಕ್ಷಾತ್ಕಾರಮಾಡಿಕೊಂಡಿರುವವರೆಂದು ಗುರುತಿಸುವದಕ್ಕೆ ಬರುವದೇ ಇಲ್ಲ. ಏಕೆಂದರೆ ಮಹಾತ್ಮರಾದವರು ತಾವು ತತ್ತ್ವಸಾಕ್ಷಾತ್ಕಾರವನ್ನು ಪಡೆದುಕೊಳ್ಳುವದಕ್ಕಿಂತ ಮುಂಚೆ-ಅನುಸರಿಸುತ್ತಿದ್ದ ಆಚಾರವಿಚಾರಗಳನ್ನೇ ಆಮೇಲೂ ಇಟ್ಟುಕೊಂಡಿರುವದೇ ಬಹಳವಾಗಿ ರೂಢಿಯಲ್ಲಿರುತ್ತದೆ. ಅವರು ಯಾವ ದೇಶದಲ್ಲಿ ಯಾವ ಕಾಲದಲ್ಲಿ ಯಾವ ಸ್ಥಿತಿಯಲ್ಲಿ ಅವತರಿಸಿ ವಿದ್ಯಾಭ್ಯಾಸಮಾಡಿರುವರೋ, ಅಲ್ಲಿ ಯಾವ ಬಗೆಯ ದೀಕ್ಷೆಯೇ ಮುಂತಾದವುಗಳನ್ನು ಸ್ವೀಕರಿಸಿದ್ದರೋ, ಅದಕ್ಕನುಸಾರವಾಗಿಯೇ, ಬಹುಮಟ್ಟಿಗೆ ಈಗಿನ ಅವರ ಬಾಹ್ಯಾಚಾರವೂ ವೇಷವೂ ಕಂಡುಬರುತ್ತಿರುತ್ತದೆ. ಇದಲ್ಲದೆ ಅವರಲ್ಲಿ ಕೆಲವರು ತ್ಯಾಗಿಗಳಾಗಿರುತ್ತಾರೆ, ಕೆಲವರು ಯೋಗಿಗಳಾಗಿರುತ್ತಾರೆ; ಕೆಲವರು ಏಕಾಂತವಾಸಿಗಳಾಗಿರುತ್ತಾರೆ, ಕೆಲವರು ಜನರ ಮಧ್ಯದಲ್ಲಿದ್ದು ಕಾರ್ಯನಿರತ ರಾಗಿರುತ್ತಾರೆ ; ಕೆಲವರು ಶಾಸ್ತ್ರೋಕ್ತವಾದ ಆಚಾರನಿಯಮಗಳನ್ನು ವ್ಯವಸ್ಥೆಯಿಂದ ಅನುಸರಿಸುತ್ತಿರುತ್ತಾರೆ, ಮತ್ತೆ ಕೆಲವರು ಸ್ವಾಭಾವಿಕವಾಗಿ ಆಯಾ ಕಾಲದ ಲೌಕಿಕರೀತಿಯಿಂದ ಇರುತ್ತಾರೆ. ಅವರ ವೇಷ, ಭೂಷಣ, ಭಾಷೆ-ಇವುಗಳು ಒಬ್ಬೊಬ್ಬರಲ್ಲಿ ಒಂದೊಂದು ಬಗೆಯಾಗಿರುತ್ತವೆ. ಹೀಗಿರುವದರಿಂದ ಗಡ್ಡವನ್ನು ಬಿಟ್ಟವನೇ ಸಾಧುವು, ಕಾವಿಯನ್ನು ಹೊದ್ದವನೇ ಸಾಧುವು, ಶಾಸ್ತ್ರವಾಕ್ಯಗಳನ್ನು ನುಡಿಯಬಲ್ಲವನೇ ಸಾಧುವು-ಎಂದೀ ಪರಿಯಲ್ಲಿ ಸಾಧುಗಳನ್ನು ಆರಿಸಿಕೊಂಡು ಸದ್ಗುರುವನ್ನು ಮಾಡಿಕೊಳ್ಳುವದಕ್ಕೆ ಬರುವದಿಲ್ಲ.

ಸಾಧುಗಳು ಯಾವ ಆಚಾರವನ್ನಾದರೂ ಅನುಸರಿಸಿರಲಿ, ಯಾವ ವೇಷವನ್ನಾದರೂ ಧರಿಸಿರಲಿ, ಅವರ ಹೊರಗಿನ ನಡೆನುಡಿಗಳು ಯಾವ ತೆರನಾಗಿಯೇ ಇರಲಿ, ನಾವು ಸದ್ಗುರುವೆಂದು ಆರಿಸಿಕೊಳ್ಳಬೇಕಾದ ಮಹಾತ್ಮನಲ್ಲಿ ಇರಲೇಬೇಕಾದ ಲಕ್ಷಣಗಳು ಕೆಲವುಂಟು. ಅವುಗಳಲ್ಲಿ ಮುಖ್ಯವಾದವನ್ನು ಇಲ್ಲಿ ತಿಳಿಸುತ್ತೇವೆ. ಮೊಟ್ಟಮೊದಲನೆಯದಾಗಿ ಸದ್ಗುರುವಿನಲ್ಲಿ **ಸನ್ನಿಷ್ಠೆ**ಯಿರಬೇಕು.

ಸನ್ನಿಷ್ಠೆಯೆಂದರೆ ಪರಮೇಶ್ವರನಲ್ಲಿಯೇ ಮನಸ್ಸು ನಿಲುಗಡೆಯಾಗಿರುವದು. ಯಾವ ಮಹಾತ್ಮನಿಗೆ ಭಗವಂತನ ವಿಚಾರ, ಧ್ಯಾನ, ಚರ್ಚೆ, ಕಥಾಶ್ರವಣ, ಕಥಾಪಾಠನ, ಗುಣಗಾನ, ಭಜನ- ಮುಂತಾದವುಗಳಲ್ಲಿ ಸ್ವಾಭಾವಿಕವಾಗಿಯೇ ಪ್ರೀತಿಯಿರುವದೋ, ಯಾವನು ಈ ನಿಷ್ಠೆಯನ್ನು ಒಂದು ಕ್ಷಣಹೊತ್ತೂ ಬಿಟ್ಟು ಇರಲಾರನೋ, ಅವನು ಸಾಧುಪುರುಷನೆನ್ನುವದಕ್ಕೆ ಎಳ್ಳಷ್ಟೂ ಸಂದೇಹವಿಲ್ಲ. ಸನ್ನಿಷ್ಠೆಯುಳ್ಳ ಮಹಾತ್ಮರು ಜ್ಞಾನಿ, ಭಕ್ತ, ಯೋಗಿ, ಕರ್ಮಿ-ಎಂಬ ಯಾವ ಹೆಸರಿನಿಂದಲಾದರೂ ಪ್ರಸಿದ್ಧರಾಗಿರಬಹುದು; ಹೇಗಿದ್ದರೂ ಅವರ ಜ್ಞಾನವು ಭಗವಂತನ ಸ್ವರೂಪದ ಜ್ಞಾನವಾಗಿರುತ್ತದೆ, ಭಕ್ತಿಯು ಭಗವಂತನಲ್ಲಿರುವ ಪ್ರೇಮವಾಗಿರುತ್ತದೆ, ಯೋಗವು ಭಗವಂತನ ಸಂತತ ಚಿಂತನವಾಗಿರುತ್ತದೆ, ಕರ್ಮವು ಭಗವತ್ಪ್ರೀತ್ಯರ್ಥವಾದ ಕರ್ಮವಾಗಿರುತ್ತದೆ. ಮೀನಿಗೆ ನೀರನ್ನು ಬಿಟ್ಟಿರುವದು ಹೇಗೆ ಆಗಲಾರದೋ ಹಾಗೆಯೇ ಸಾಧುಗಳಿಗೆ ಸನ್ನಿಷ್ಠೆಯನ್ನು ಬಿಟ್ಟು ಇರುವದು ಆಗುವ ಹಾಗೆಯೇ ಇರುವದಿಲ್ಲ. ಯಾವನಿಗೆ ಈ ಸನ್ನಿಷ್ಠೆ ಇರುವದೋ ಅವನೇ ನಮ್ಮನ್ನು ಸನ್ಮಾರ್ಗಕ್ಕೆ ಬಿಡಬಲ್ಲವನಾಗಿರುತ್ತಾನೆ ; ಅವನನ್ನು ನಾವು ಸದ್ಗುರುವಾಗಿ ಸ್ವೀಕರಿಸುವದರಲ್ಲಿ ಯಾವ ಆತಂಕವೂ ಇರುವದಿಲ್ಲ.

ಸದ್ಗುರುವೆಂದು ನಾವು ಸ್ವೀಕರಿಸುವ ಮಹಾಪುರುಷನು **ನಿಷ್ಕಾಮ**ನಾಗಿರಬೇಕು. ಇದು ಅವನಲ್ಲಿರಬೇಕಾದ ಎರಡನೆಯ ಮುಖ್ಯಲಕ್ಷಣವು. ಯಾವಾತನಿಗೆ ಪರಮೇಶ್ವರನಲ್ಲಿಯೇ ನಿಷ್ಠೆಯಿರುವದೋ ಅವನಿಗೆ ಆ ನಿಷ್ಠೆಯಿಂದ ಎಲ್ಲಕ್ಕಿಂತಲೂ ಹೆಚ್ಚಿನ ತೃಪ್ತಿಯು ದೊರಕಿರುವದೆಂದು ನಾವು ನಿರೀಕ್ಷಿಸಬಹುದಾಗಿದೆ. ಯಾವ ಭಗವಂತನು ಆಪ್ತಕಾಮನಾಗಿರುವನೋ, ಯಾವ ಭಗವಂತನು ತನ್ನ ಭಕ್ತರ ಇಷ್ಟಾರ್ಥಗಳನ್ನೆಲ್ಲ ಈಡೇರಿಸುವನೆಂದು ಶಾಸ್ತ್ರಗಳಲ್ಲಿ ಸಾರಿಹೇಳಿರುತ್ತದೆಯೋ, ಅಂಥ ಭಗವಂತನನ್ನು ಸೇವಿಸುವವರನ್ನು ಈ ಮಾಯಾಪ್ರಪಂಚವಿಲಾಸದ ಒಲಪು ವೈಯ್ಯಾರಗಳು ಮತ್ತೆ ಎಂದಿಗೂ ಇತ್ತಕಡೆಗೆ ಎಳೆಯಲಾರವು. ಯಾವನು ತಾನೇ ಮಾಯಾಜಾಲದಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿರುವನೋ ಅವನು ಮತ್ತೊಬ್ಬರನ್ನು ಅದರಿಂದ ಬಿಡುಗಡೆಮಾಡುವ ಸದ್ಗುರುವೆಂದು ಯಾರುತಾನೆ ನಂಬುವರು? ಸದ್ಗುರುವು ಅತ್ಯಂತ ನಿಷ್ಕಾಮನಾಗಿರುವದು ಮಾತ್ರವೇ ಅಲ್ಲ, ಸಕಾಮರಾಗಿರುವವರಿಗೆ ಕೂಡ ಆತನ

ಸನ್ನಿಧಿಯಲ್ಲಿ ಕಾಮುಗಳ ಒಗ್ಗೆ ಜಿಹಾಸೆ ಹುಟ್ಟುವಂತಿರಬೇಕು. ಇದೇ ಸದ್ಗುರುವಿನ ಮುಖ್ಯ ಗುರುತು.

ಸದ್ಗುರುವಿನಲ್ಲಿರಬೇಕಾದ ಮೂರನೆಯ ಲಕ್ಷಣವೆಂದರೆ **ದಯೆ.** ಸಂಸಾರದಿಂದ ತಾನು ಪಾರಾಗಿದ್ದೇನೆಂಬ ಹೆಮ್ಮೆಯಿಂದ ಸಂಸಾರಸಾಗರದಲ್ಲಿ ಮುಳುಗಿತೇಲುತ್ತಿರುವವರನ್ನು ಕಂಡು ಮುಗುಳುನಗೆಯನ್ನು ಸೂಸುತ್ತಿರುವವನು ಹೇಗೆತಾನೆ ಸದ್ಗುರುವೆನಿಸಿಯಾನು? ಜಗತ್ತೆಲ್ಲವನ್ನೂ ಸೃಷ್ಟಿಸಿರುವ ಪರಮೇಶ್ವರನು ಹೇಗೆ ಜನರನ್ನು ಉದ್ಧಾರಮಾಡುವದಕ್ಕೆ ಬೇಕಾದ ಸಾಧನಗಳನ್ನು ಸೃಷ್ಟಿಸಿ ಸಂತತವಾಗಿಯೂ ಜೀವರ ಪರಗತಿಗೆ ಬೇಕಾದ ಏರ್ಪಾಡುಗಳನ್ನೇ ಮಾಡುತ್ತಿರುವನೋ ಪರಮಾರ್ಥವಾಗಿ ಸದ್ಗುರುವಾಗಬಲ್ಲ ಮಹನೀಯನೂ ಹಾಗೆಯೇ ನಿರಂತರವೂ ಸಂಸಾರಿಜೀವರಮೇಲೆ ತನ್ನ ಕೃಪಾದೃಷ್ಟಿಯನ್ನು ಬೀರುತ್ತಲೂ ತತ್ತ್ವೋಪದೇಶವನ್ನು ಮಾಡುತ್ತಲೂ ಪರಮಗತಿಗೆ ಬೇಕಾದ ಸಾಧನಗಳನ್ನು ತೋರಿಸಿಕೊಡುತ್ತಲೂ ಇರುವನು.

ಸದ್ಗುರುವಾದವನಿಗೆ ಇರಬೇಕಾದ ನಾಲ್ಕನೆಯ ಲಕ್ಷಣವೆಂದರೆ **ಸಮತ್ವವು.** ಒಬ್ಬರಲ್ಲಿ ದಯೆಯನ್ನು ಮಾಡುವಾಗ ಅವನು ಮತ್ತೊಬ್ಬರಲ್ಲಿ ದ್ವೇಷವನ್ನು ಎಂದಿಗೂ ಮಾಡುವದಿಲ್ಲ. ಶತ್ರು, ಮಿತ್ರ, ಉದಾಸೀನ -ಎಲ್ಲರಲ್ಲಿಯೂ ಆತನಿಗೆ ಒಂದೇ ವಿಧವಾದ ಪ್ರೇಮವಿರುತ್ತದೆ, ಆತನು ಸಾಮಾನ್ಯ ಜನರಂತೆ ತನ್ನ ಸುಖಕ್ಕಾಗಿ ಮತ್ತೊಬ್ಬರಿಗೆ ಎಂದಿಗೂ ಹಿಂಸೆಯನ್ನು ಕೊಡುವದಿಲ್ಲ; ಮತ್ತೊಬ್ಬರಿಗೆ ಉಪಕಾರವನ್ನು ಮಾಡುವದಕ್ಕೆ ಅವಶ್ಯಬಿದ್ದರೆ ತನ್ನ ದೇಹವನ್ನಾದರೂ ಸಂತೋಷದಿಂದ ಅರ್ಪಿಸುವದಕ್ಕೆ ಸಿದ್ಧನಾಗಿರುತ್ತಾನೆ. ತನಗೆ ಎಂಥ ಸುಖದುಃಖ, ಮಾನಾಪಮಾನ- ಮುಂತಾದ ದ್ವಂದ್ವಗಳ ಹೊಡೆತವು ತಗಲುತ್ತಿದ್ದರೂ ಒಂದಿಷ್ಟೂ ಮನಸ್ಸಿನಲ್ಲಿ ಏರುಪೇರಿಲ್ಲದೆ ಮಿಕ್ಕ ಜೀವರ ಸುಖವನ್ನು ಕಂಡು ಸುಖಿಯಾಗಿಯೂ ದುಃಖವನ್ನು ಕಂಡು ದುಃಖಿಯಾಗಿಯೂ ಇರುತ್ತಾನೆ. ಎಲ್ಲರಿಗೂ ಸುಖದ ಮಾರ್ಗವನ್ನು ತೋರಿಸಿಕೊಡುವದೇ ಇಂಥ ಮಹಾಪುರುಷನ ಸ್ವಭಾವವಾಗಿರುತ್ತದೆ. ಎಲ್ಲರಲ್ಲಿಯೂ ತನ್ನ ಪರಮಾರಾಧ್ಯನಾದ ಪರಮೇಶ್ವರನನ್ನೇ ಕಾಣುತ್ತಾ ಎಲ್ಲರನ್ನೂ ಒಂದೇ ಸಮನಾಗಿ ಪ್ರೀತಿಸುತ್ತಿರುವದೇ ಆತನ ನಿತ್ಯವರ್ತನೆಯಾಗಿರುತದೆ.

ಭಗವದ್ಗೀತೆಯೇ ಮುಂತಾದ ಅಧ್ಯಾತ್ಮಗ್ರಂಥಗಳಲ್ಲಿ **ಸ್ಥಿತಪ್ರಜ್ಞ, ಯುಕ್ತ, ಭಕ್ತ, ಗುಣಾತೀತ, ಜೀವನ್ಮುಕ್ತ, ಬ್ರಾಹ್ಮಣ, ಅತಿವರ್ಣಾಶ್ರಮಿ-**ಎಂಬ ಹೆಸರಿನಿಂದ ವರ್ಣಿಸಿರುವ ಮಹಾತ್ಮರಲ್ಲಿ ಯಾವ ಯಾವ ಲಕ್ಷಣಗಳಿರುತ್ತವೆಯೋ ಅಂಥ ಲಕ್ಷಣವುಳ್ಳವನೇ ಸನ್ನಿಷ್ಠೆಯುಳ್ಳ ಕೃತಕೃತ್ಯನಾಗಿರುತ್ತಾನೆ; ಆದ್ದರಿಂದ ಅಂಥವನೇ ಸಂಸಾರಿಗಳನ್ನು ದುಃಖದಿಂದ ಬಿಡುಗಡೆಮಾಡಬಲ್ಲವನಾಗಿರುತ್ತಾನೆ. ಆದರೆ ಶಾಸ್ತ್ರದಲ್ಲಿ ಹೇಳಿರುವ ಆ ವರ್ಣನೆಗಳನ್ನೆಲ್ಲ ಅರ್ಥಮಾಡಿಕೊಳ್ಳುವ ಶಕ್ತಿಯು ಎಲ್ಲರಿಗೂ ಇರುವದಿಲ್ಲವಾದ್ದರಿಂದ ಸದ್ಗುರುವನ್ನು ಆರಿಸಿಕೊಳ್ಳುವ ಅಭಿಲಾಷೆಯುಳ್ಳ ಆಸ್ತಿಕರ ಸಲುವಾಗಿ ಸನ್ನಿಷ್ಠೆ, ನಿಷ್ಕಾಮತೆ, ದಯೆ, ಸಮತೆ-ಎಂಬ ನಾಲ್ಕು ಮುಖ್ಯ ಲಕ್ಷಣಗಳನ್ನು ಮೇಲೆ ತಿಳಿಸಿದ್ದಾಗಿದೆ.

೭

ಸದ್ಗುರುವಿನಲ್ಲಿರಬೇಕಾದ ಲಕ್ಷಣಗಳನ್ನು ತಿಳಿಯುವದಕ್ಕಿಂತಲೂ ಮೊದಲು ಯಾವ ಲಕ್ಷಣಗಳು ಆತನಲ್ಲಿರಬಾರದೋ ಅವನ್ನು ತಿಳಿದುಕೊಳ್ಳುವದು ಅತ್ಯವಶ್ಯವಾಗಿದೆ. ಏಕೆಂದರೆ ತಿಳಿಯದವರ ಆಸ್ತಿಕ್ಯಬುದ್ಧಿಯನ್ನು ದುರುಪಯೋಗಪಡಿಸಿಕೊಳ್ಳುವದಕ್ಕೆ ಹವಣಿಸುತ್ತಿರುವ ಸಾಧುವೇಷಧಾರಿಗಳು ಈಗಿನ ಕಾಲದಲ್ಲಿ ಬಹುಜನರು ಕಂಡುಬರುತ್ತಾರೆ.

ಮೇಲೆ ಹೇಳಿದ ಸದ್ಗುರುವಿನ ಲಕ್ಷಣಗಳಿಂದಲೇ ಅವುಗಳಿಗೆ ವಿರುದ್ಧವಾದ ಲಕ್ಷಣವುಳ್ಳವರು ಎಂದಿಗೂ ಗುರುವಾಗಲಾರರೆಂದು ಖಂಡಿತವಾಗಿ ಹೇಳಬಹುದಾಗಿದೆ. ಯಾರಿಗೆ ಈಶ್ವರವಿಚಾರವೆಂಬುದು ಬಹುದೂರವಾಗಿರುವದೋ ಯಾರಿಗೆ ಇಂದ್ರಿಯಲೋಲುಪತೆಯು ಅತಿಯಾಗಿ ಅದರ ತೃಪ್ತಿಗಾಗಿ ಹಗಲೂ ಇರುಳೂ ಹಣವನ್ನು ಗಳಿಸುವದು, ಅದನ್ನು ಕೂಡಿಹಾಕುವದು- ಇವೇ ಉದ್ಯೋಗವಾಗಿರುವವೋ ಯಾರು ಸಂಸಾರದಲ್ಲಿ ಮಗ್ನರಾಗಿ ಆಡಂಬರದ ಜೀವನವನ್ನು ಸ್ವೀಕರಿಸಿ ಸವಿಸವಿಯಾದ ಭಕ್ಷ್ಯಭೋಜ್ಯಗಳನ್ನು ದಿನದಿನವೂ ಸೇವಿಸುತ್ತಲೂ ಅನರ್ಘ್ಯವಾದ ವಸ್ತ್ರಭೂಷಣಗಳನ್ನು ಧರಿಸಿಕೊಂಡು ನಾಟಕ, ಸಿನಿಮಾ- ಎಂದು ಹರಿದಾಡುತ್ತಿರುವರೋ, ಶೃಂಗಾರ ಪ್ರಧಾನವಾದ ವಾಙ್ಮಯವನ್ನು ಓದುತ್ತಾ ಸ್ತ್ರೀಯರ ಗುಂಪನ್ನು ಸೇವಿಸುತ್ತಾ ಸಂಗೀತನರ್ತನಾದಿಗಳಿಂದ ಕಾಲಕ್ಷೇಪವನ್ನು ಮಾಡುತ್ತಿರುವರೋ, ಯಾರಿಗೆ ಬಡವರಲ್ಲಿಯೂ ದುಃಖಿಗಳಲ್ಲಿಯೂ ದಯೆಯು ಒಂದಿಷ್ಟೂ

ಇರುವದಿಲ್ಲವೋ, ಯಾರು ಕೋರ್ಟು ಕಛೇರಿ ಮುಂತಾದ ವ್ಯವಹಾರಗಳನ್ನು ಹಚ್ಚಿಕೊಂಡು ರಾಗದ್ವೇಷಗಳನ್ನು ಬೆಳೆಸಿಕೊಳ್ಳುತ್ತಲೇ ಇರುವರೋ, ಅವರು ಎಂದಿಗೂ ಸದ್ಗುರುವಾಗಲಾರರೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ಎಲ್ಲರಿಗೂ ಸದ್ಗುರುವಿನ ಸಹಾಯವು ಬೇಕೇ ಬೇಕು; ಸತ್ಸಂಗತಿಯಿಂದಲ್ಲದೆ ಭಗವದ್ಭಕ್ತಿಯಾಗಲಿ ಜ್ಞಾನವಾಗಲಿ ದೊರೆಯುವದು ಕಡು ಕಷ್ಟವೇಕೆ, ಅಸಾಧ್ಯವೆಂದೇ ಹೇಳಬಹುದು. ಆದ್ದರಿಂದ ಯಾವ ಸತ್ಪುರುಷರನ್ನಾದರೂ ಕಂಡರೆ ಅಧ್ಯಾತ್ಮಮಾರ್ಗದರ್ಶಿಗಳೆಂದು ಅವರಲ್ಲಿ ಗೌರವಬುದ್ಧಿಯಿಂದ ನಡೆದುಕೊಳ್ಳುವದೇ ಯೋಗ್ಯವಾದದ್ದು. ಅವರ ಸಹವಾಸವನ್ನು ಮಾಡಿದ ಹಾಗೆಲ್ಲ ತನ್ನ ಅಧ್ಯಾತ್ಮಬಲವು ಹೆಚ್ಚುತ್ತಾ ಬಂದರೆ, ಮತ್ತು ತನ್ನಲ್ಲಿ ಅಧಿಕವಾಗಿದ್ದ ಆಸುರಗುಣಗಳು ಹಿಮ್ಮೆಟ್ಟುತ್ತಾ ಹೋದರೆ, ನಿಜವಾಗಿಯೂ ಅವರು ಸತ್ಪುರುಷರೆಂದೇ ನಿಶ್ಚಯಿಸಬಹುದು. ಅವರ ಆಚಾರದ, ವಾಕ್ಕಿನ ಮತ್ತು ಭವ್ಯಬ್ರಹ್ಮತೇಜದ ಪ್ರಭಾವವು ತನ್ನ ಮೇಲೆ ತಪ್ಪಿಸಿ ಕೊಳ್ಳಲಾರದಷ್ಟು ಪ್ರಬಲವಾಗಿ ಬಿದ್ದರೆ ಅಂಥವರನ್ನು ಹೃದಯದಲ್ಲಿ ಸದ್ಗುರುವೆಂದು ಭಾವನೆಮಾಡುವದಲ್ಲದೆ ಬಾಹ್ಯದಲ್ಲಿಯೂ ಅವರ ಸೇವೆಯನ್ನು ಕೈಗೊಳ್ಳುವದು ಎಲ್ಲಾ ಬಗೆಯಿಂದಲೂ ಶ್ರೇಯಸ್ಕರವಾಗಿರುತ್ತದೆಯೆಂಬುದರಲ್ಲಿ ಸಂದೇಹವಿಲ್ಲ. ಗಾಳಿಯು ಬೀಸುವಾಗ ಅಲ್ಲಲ್ಲಿ ವಾಸನೆಯನ್ನು ಸ್ವಭಾವದಿಂದಲೇ ತರುವಂತೆ ಸಜ್ಜನರಿಂದ ಬೀಸುವ ಅಧ್ಯಾತ್ಮವಾತವು ಅವರ ಪವಿತ್ರಮನಃಕಮಲದ ಸುಗಂಧವನ್ನು ಅವಶ್ಯವಾಗಿ ಬೀರಿಯೇತೀರುತ್ತದೆ; ಹಾಗಿಲ್ಲದೆ ಒಳಗೆ ಕಲ್ಮಷವನ್ನು ತುಂಬಿಕೊಂಡು ಹೊರಗೆ ಮಾತ್ರ ಸಾಧುವೇಷವನ್ನು ಧರಿಸಿ ಶಿಷ್ಯರ ಬೇಟೆಗೆ ಹೊರಟಿರುವ ದುರಾತ್ಮರಾದರೆ ಅವರ ದುರಾಶಯದ ದುರ್ಗಂಧವು ಅವರ ಕಡೆಯಿಂದ ಬೀಸುವ ಗಾಳಿಯಲ್ಲಿ ಸೇರಿಕೊಳ್ಳದೆ ಇರುವದೇ ಇಲ್ಲ. ಅಂಥವರ ವಿಷಯದಲ್ಲಿ ಎಚ್ಚರಿಕೆಯಿಲ್ಲದಿದ್ದರೆ ಸಾಮಾನ್ಯರು ಮೋಸಹೋಗಿ ಗುಂಡಿಗೆ ಬೀಳುವ ಸಂಭವವೇ ಬಹಳ ಹೆಚ್ಚಾಗಿರುತ್ತದೆ. ಆದ್ದರಿಂದ ಬಾಹ್ಯವರ್ತನೆಯಲ್ಲಿಯೇ ಕಂಡುಹಿಡಿಯಬಹುದಾದ ಇಂಥ ಧೂರ್ತಲಕ್ಷಣಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ತಿಳಿಸುತ್ತೇವೆ.

**ಯಾವನು ಶಾಸ್ತ್ರವನ್ನು ಬೇಕೆಂತ ಉಲ್ಲಂಘಿಸಿ ನಡೆಯುವನೋ ಅವನು ಸದ್ಗುರುವಾಗಲಾರನು.** ಶಾಸ್ತ್ರವು ಈಶ್ವರನ ಕಟ್ಟಳೆಯಾದ್ದರಿಂದ ಸನಿಷ್ಠೆಯಿಂದ ಈಶ್ವರತಾದಾತ್ಮ್ಯವನ್ನು ಹೊಂದಿರುವ ಮಹನೀಯರು ಎಂದಿಗೂ

ಶಾಸ್ತ್ರವನ್ನು ತಿರಸ್ಕರಿಸಲಾರರು. ತತ್ತ್ವದರ್ಶಿಗಳಲ್ಲಿ ಕೆಲವರು ಪ್ರವೃತ್ತಿಧರ್ಮಗಳ ನ್ನನುಸರಿಸುತ್ತಿರುತ್ತಾರೆ, ಮತ್ತೆ ಕೆಲವರು ನಿವೃತ್ತಿಧರ್ಮವನ್ನು ಅನುಸರಿಸುತ್ತಿರುತ್ತಾರೆ. ಎಲ್ಲಿಯೋ ಕೆಲವರು ಮಾತ್ರ ಪ್ರವೃತ್ತಿ ನಿವೃತ್ತಿರೂಪ ಕ್ರಿಯಾಚಾರಗಳನ್ನು ತೋರ್ಪಡಿಸದೆ ಏನೂ ಅರಿಯದ ಹುಡುಗರಂತೆಯೂ ಅಜ್ಞರಂತೆಯೂ ಹುಚ್ಚರಂತೆಯೂ ಜನರಿಗೆ ಕಾಣಿಸಿಕೊಂಡು ತಮ್ಮ ಬ್ರಹ್ಮಾನಂದದಲ್ಲಿ ತಾವು ಇದ್ದುಬಿಡುತ್ತಾರೆ. ಇಂಥ ಮಹಾತ್ಮರು ಉಪದೇಶವನ್ನು ಮಾಡುವ ಗೋಜಿಗೆ ಹೋಗುವದಿಲ್ಲ; ಆದರೂ ಅವರ ಸನ್ನಿಧಿಯಿಂದಲೇ ಜನರಿಗೆ ಸದ್ಬುದ್ಧಿಯುಂಟಾಗಿ ಸನ್ಮಾರ್ಗದಲ್ಲಿ ಪ್ರೇರಣೆಯಾಗುತ್ತದೆ. ಕೆಲವರು ವಂಚಕಜನರು ಇಂಥ ಮಹಾಮಹಿಮರ ಅವಧೂತಚರ್ಯೆಯನ್ನು ಬಾಹ್ಯದಲ್ಲಿ ಅನುಕರಣೆಮಾಡುತ್ತಾ ವರ್ಣಾಶ್ರಮಧರ್ಮವನ್ನು ಕೈಬಿಟ್ಟು ಯಜ್ಞದಾನ ತಪಸ್ಸುಗಳಲ್ಲಿ ವಿಮುಖರಾಗಿ ತಂದೆತಾಯಿಗಳನ್ನೂ ಸೇವಿಸದೆ ತಮ್ಮನ್ನು ನಂಬಿದವರನ್ನೂ ಕಾಪಾಡದೆ ಸ್ವೇಚ್ಛೆಯಿಂದ ತಿರುಗುತ್ತಾ ನರಕಕ್ಕೆ ಸಂಚಕಾರವನ್ನು ಹಿಡಿಯುವರಲ್ಲದೆ ತಮ್ಮ ಹತ್ತಿರಕ್ಕೆ ಬಂದವರನ್ನೂ ಮರುಳುಗೊಳಿಸಿ ದುರ್ಮಾರ್ಗಕ್ಕೆಳೆಯುವದುಂಟು. ನಿಜವಾಗಿಯೂ ಅವಧೂತರಾಗಿ, ವಿಧಿನಿಷೇಧಗಳನ್ನು ಮೀರಿ, ಪರಮಾತ್ಮನಲ್ಲಿ ಲೀನರಾಗಿ, ಸರ್ವದಿಕ್ಕುಗಳಿಗೂ ತಮ್ಮ ಸ್ವಾತ್ಮಾನಂದದ ಬೆಳದಿಂಗಳನ್ನು ಚೆಲ್ಲುತ್ತಿರುವ ದಿವ್ಯಚರಿತ್ರೆಯವರ ಸ್ಮರಣೀಯಯೋಗ್ಯತೆಗೆ ಇಂಥ ಧರ್ಮಭ್ರಷ್ಟರ ವರ್ತನದಿಂದ ಯಾವ ಕಳಂಕವೂ ಹತ್ತಲಾರದೆಂಬುದೇನೋ ಖಂಡಿತ. ಆದರೆ ಸಾಧಕರಾದವರು ಸದ್ಗುರುವನ್ನು ಹುಡುಕುವಾಗ ದುರಾಚಾರಿಗಳನ್ನು ಮೊದಲು ದೂರವಾಗಿರಿಸಬೇಕು. ಶಾಸ್ತ್ರತಿರಸ್ಕಾರವನ್ನು ಮಾಡುವಾತನು ಯಾವನೂ ಸದ್ಗುರುವಾಗಲಾರನೆಂದೇ ನೆರನಂಬಬೇಕು.

**ಯಾವಾತನು ತನ್ನ ಸಿದ್ಧಿಗಳನ್ನು ತೋರ್ಪಡಿಸಿಕೊಳ್ಳುವದಕ್ಕೆ ಹಾತುವರಿಯುತ್ತಿರುವನೋ ಅವನು ಸದ್ಗುರುವಾಗುವದಕ್ಕೆ ಅರ್ಹನಲ್ಲ.** ಸನಿಷ್ಠೆಯುಳ್ಳ ಮಹಾತ್ಮರಿಗೆ ನಿಜವಾಗಿಯೂ ಕೆಲವು ಸಿದ್ಧಿಗಳು ಉಂಟಾಗುವವು. ಸರ್ವಶಕ್ತನೂ ಸಕಲಬ್ರಹ್ಮಾಂಡದ ಸೃಷ್ಟಿಸ್ಥಿತಿಲಯಗಳ ಆಧಾರನೂ ಆಗಿರುವ ಪರಮೇಶ್ವರನ ತನ್ಮಯತೆಯನ್ನು ಹೊಂದಿರುವ ಮಹಾಮಹಿಮರಿಗೆ ಆತನ ಅನುಗ್ರಹದಿಂದ ಇಂಥ ಸಿದ್ಧಿಗಳು ಅಪ್ರಾರ್ಥಿತವಾಗಿ ಬರುವದೇನೂ

ಆಶ್ಚರ್ಯವಲ್ಲ. ಆದರೆ ಅವರು ಅದಕ್ಕೇನೂ ಹೆಚ್ಚಿನ ಬೆಲೆಯನ್ನು ಕೊಟ್ಟಿರುವದಿಲ್ಲ. ಭಗವಂತನ ಪ್ರೇಮವೇ ಈ ಸಂಸಾರದಲ್ಲಿ ಸಾರವೆಂಬದನ್ನು ಅವರು ಬಲ್ಲವರಾಗಿರುತ್ತಾರೆ. ಇದಲ್ಲದೆ ಎಳ್ಳಷ್ಟೂ ತತ್ತ್ವಜ್ಞಾನವು ಇಲ್ಲದಿದ್ದರೂ ತಪಸ್ಸೇ ಮುಂತಾದವುಗಳಿಂದಲೂ ಇಂಥ ಸಿದ್ಧಿಯನ್ನು ಪಡೆಯಬಹುದೆಂದು ಪುರಾಣಾದಿಗಳಿಂದ ತಿಳಿಯಬರುತ್ತದೆ. ಅಥವಾ ಕೈಚಳಕವೇ ಮುಂತಾದ ಲೌಕಿಕಕರ್ಮಗಳಿಂದಲೂ ಇಂಥ ಚಮತ್ಕಾರಗಳನ್ನು ತೋರಿಸುವದು ಅಸಾಧು ಜನರಿಗೂ ಶಕ್ಯವಾಗಿರುತ್ತದೆ. ಈ ಕಾರಣಗಳಿಂದ ಚಮತ್ಕಾರಕ್ಕೂ ತತ್ತ್ವಸಾಕ್ಷಾತ್ಕಾರಕ್ಕೂ ಯಾವ ಸಂಬಂಧವೂ ಇರುವದಿಲ್ಲವೆಂದು ತಿಳಿಯಬೇಕು. ಇದು ಹೇಗಾದರೂ ಇರಲಿ. ಚಮತ್ಕಾರವೆಂಬುದು ಅನಾತ್ಮಪ್ರಪಂಚಕ್ಕೆ ಸೇರಿದ್ದಾದ್ದರಿಂದ ಯಾವನು ಅದರಲ್ಲಿ ಹೆಚ್ಚಿನ ಮಮತೆಯನ್ನು ತೋರಿಸುವನೋ ಅವನು ನಿಜವಾದ ಜ್ಞಾನಿಯಲ್ಲವೆಂದೂ ಅವನು ನಮಗೆ ತತ್ತ್ವವನ್ನುಪದೇಶಿಸುವ ಸದ್ಗುರುವಾಗಲಾರನೆಂದೂ ನಾವು ಧಾರಾಳವಾಗಿ ನಂಬಬಹುದಾಗಿದೆ.

**ಖ್ಯಾತಿ, ಲಾಭ, ಪೂಜೆ-ಮುಂತಾದವುಗಳಲ್ಲಿಯೇ ದೃಷ್ಟಿಯನ್ನಿಟ್ಟಿರುವವನು ಸದ್ಗುರುವಾಗುವದಕ್ಕೆ ತಕ್ಕವನಲ್ಲ.** ಅಭಿಮಾನವು ಹೇಗೆ ಅಧ್ಯಾತ್ಮಮಾರ್ಗ ದಲ್ಲಿ ಮುಂದುವರೆಯುವದಕ್ಕೆ ಅಡಚಣೆಯೋ ಅದರಂತೆ ಧರ್ಮಧ್ವಜಿಯಾಗಿರುವದೂ ಅಡಚಣೆಯೇ ಆಗಿರುತ್ತದೆ. ಆದ್ದರಿಂದಲೇ ಭಗವದ್ಗೀತೆಯಲ್ಲಿ **ಅಮಾನಿತ್ವ, ಅಂದಭಿತ್ವ-** ಎಂಬಿವುಗಳನ್ನು ಜ್ಞಾನಿಗಳ ಗುಣಗಳಲ್ಲಿ ಮೊಟ್ಟಮೊದಲು ಕೊಟ್ಟಿರುತ್ತದೆ. ಯಾವನು ತಾನು ಸಾಧುವೆಂದೂ ಮಹಾತ್ಮನೆಂದೂ ಯೋಗಿಯೆಂದೂ ಸಿದ್ಧನೆಂದೂ ತನ್ನನ್ನು ತಾನೇ ಹೊಗಳಿಕೊಳ್ಳುತ್ತಿರುವನೋ ಅಥವಾ ತನ್ನ ಕಡೆಯವರಿಂದ ಪ್ರಕಟಿಸಿಕೊಳ್ಳುತ್ತಿರುವನೋ, ಯಾವನು ಗುರುವಿಗೆ ತನು, ಮನ, ಧನ- ಇವುಗಳನ್ನು ಅರ್ಪಿಸುವದೇ ಮುಖ್ಯಸಾಧನವೆಂದು ಉಪದೇಶಿಸುತ್ತಾ ಸಂತೆಯಲ್ಲಿ ಯೋಗಾಸನಗಳನ್ನು ಹಾಕುವದು, ಕಂಡಕಂಡವರಿಗೆ ಮಂತ್ರೋಪದೇಶ ವನ್ನೂ ದೀಕ್ಷೆಯನ್ನೂ ಕೊಡುವದು, ತನ್ನ ಆಶ್ರಮಕ್ಕೋ ಮಂದಿರಕ್ಕೋ ಎಂದು ಹಣಕಾಸನ್ನೂ ಜಿನಸನ್ನೂ ಎತ್ತುವದು, ದೇವರ ಪೀಠದಲ್ಲಿ ಕುಳಿತುಕೊಂಡು ಶಿಷ್ಯರಿಂದ ಆರತಿಯನ್ನೂ ನಮಸ್ಕಾರವನ್ನೂ ಮಾಡಿಸಿಕೊಳ್ಳುವದು- ಮುಂತಾದ ಕಾರ್ಯಗಳಲ್ಲಿ ವ್ಯಗ್ರನಾಗಿರುವದು, ಜ್ಯೋತಿಷ, ಸಾಮುದ್ರಿಕಗಳಿಂದ ಅಥವಾ ಯಾವ ಆಧಾರವೂ

ಇಲ್ಲದ ಭವಿಷ್ಯವನ್ನು ಹೇಳುವದು, ಮಕ್ಕಳ ಫಲಕ್ಕೆಂದು ಯಂತ್ರಭಸ್ಮಾದಿಗಳನ್ನು ಕೊಡುವದು- ಇಂಥ ಕಾರ್ಯಗಳಿಂದಲೇ ತನ್ನ ಖ್ಯಾತಿಯನ್ನು ಹೆಚ್ಚಿಸಿ ಕೊಳ್ಳಬೇಕೆಂದು ಹವಣಿಸುತ್ತಿರುವನೋ ಅವನು ನಿಶ್ಚಯವಾಗಿಯೂ ಮಾಯಾ ಜಾಲದಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿರುವನು. ಅಂಥವನು ತನ್ನನ್ನು ಶರಣು ಹೊಕ್ಕವರಿಗೆ ಅಭಿಮಾನ, ದಂಭ, ದರ್ಪ, ವಿಷಯದಾಸ- ಮುಂತಾದ ಆಸುರ ಧರ್ಮಗಳನ್ನಲ್ಲದೆ ಮತ್ತೇನನ್ನೂ ಹೇಳಿಕೊಡುವ ಸಂಭವವಿಲ್ಲ.

ಮೇಲೆ ತಿಳಿಸಿರುವ ಹೆಗ್ಗುರುತುಗಳನ್ನು ನೋಡಿಕೊಂಡು ಆಸ್ತಿಕರಾದವರು ಅಸತ್ಪುರುಷರ ಬಲೆಗೆ ಬೀಳದಂತೆ ದೂರವಾಗಿರಬೇಕು. ಇದರಿಂದ ಸತ್ಪುರುಷರ ತಂಟೆಗೇ ಹೋಗಬಾರದೆಂದು ಎಂದಿಗೂ ಭಾವಿಸಿಕೊಳ್ಳಬಾರದು. ಸತ್ಸಂಗದಿಂದಲೂ ಸಾಧುಸೇವೆಯಿಂದಲೂ ನಮಗೆ ಇಹಪರಕಲ್ಯಾಣಗಳೆರಡೂ ದೊರಕುತ್ತವೆ. 'ಇವನು ಸಾಧುವು', 'ಇವನು ಸಾಧುವಲ್ಲ' - ಎಂದು ಕಂಡ ಕಂಡವರನ್ನೆಲ್ಲ ಒರೆಗೆ ಹಚ್ಚುವದು ನಮ್ಮ ಕೆಲಸವಲ್ಲ; ಆ ಕೆಲಸವನ್ನು ಇಟ್ಟುಕೊಂಡರೆ ನಾವು ದುರಹಂಕಾರಿಗಳಾಗಿ ಬೆಳೆದು ಸನ್ಮಾರ್ಗಕ್ಕೆ ಅಡ್ಡಲಾಗಿ ಮುಳ್ಳಿನ ಬೇಲಿಯನ್ನು ಬೆಳೆದುಕೊಂಡವರಾಗುತ್ತೇವೆ. ಅಸತ್ಪುರುಷರ ಸೇವೆಯಿಂದ ಹಾನಿಯುಂಟಾಗು ವದು ನಿಜ; ಆದರೆ ದುರಭಿಮಾನದಿಂದಲೂ ಅಕ್ಷಮ್ಯವಾದ ಅಪರಾಧದಿಂದಲೂ ಠಕ್ಕರೆಂದು ತಿಳಿದುಬಂದವರನ್ನು ಹೊರತು ಮಿಕ್ಕ ಯಾರನ್ನೂ ನಾವು ತಿರಸ್ಕರಿಸ ಬಾರದು. ಸಾಧುಗಳೆನಿಸಿರುವವರಲ್ಲಿ ಪ್ರಮಾದದಿಂದ ಏನಾದರೂ ತಪ್ಪು ಕಂಡು ಬಂದರೂ ಸವಿನಯವಾಗಿ ಅದನ್ನು ಅವರ ಲಕ್ಷ್ಯಕ್ಕೆ ತರಬೇಕು. ಯೋಗ್ಯ ರಾದವರು ಕೂಡಲೆ ತಮ್ಮ ತಪ್ಪನ್ನು ಒಪ್ಪಿಕೊಂಡು ತಿದ್ದಿಕೊಳ್ಳುವರು. ಪೂಜ್ಯ ರಾಗಿರುವ ಹಿರಿಯರನ್ನಂತೂ ಗೌರವದಿಂದಲೇ ಕಾಣಬೇಕು. ಸಾಧುಜನರನ್ನೇ ಅಲ್ಲದೆ ಸಾತ್ತ್ವಿಕರಾಗಿರುವವರೆಲ್ಲರಿಗೂ ಉಚಿತವಾದ ಸೇವೆಯನ್ನು ಮಾಡುವದು ಒಂದು ದೊಡ್ಡ ಆಧ್ಯಾತ್ಮಿಕಸಾಧನವಾಗಿದೆಯೆಂಬುದನ್ನು ಯಾವಾಗಲೂ ನಾವೂ ಲಕ್ಷ್ಯದಲ್ಲಿಟ್ಟಿರಬೇಕು.

ಇದನ್ನೆಲ್ಲ ಓದಿದ ಕೆಲವರು ವಾಚಕರು ಸದ್ಗುರುವನ್ನು ಕಂಡು ಹಿಡಿಯುವದು ಕಡುಕಷ್ಟವೆಂದೂ ಅವರ ಅನುಗ್ರಹಕ್ಕೆ ಪಾತ್ರರಾಗುವದಂತೂ ಪರಮದುರ್ಲಭವೆಂದೂ ಭಾವಿಸಬಹುದು. ಅಂಥ ನಿರಾಶೆಗೇನೂ ಕಾರಣವಿಲ್ಲ. ಏಕೆಂದರೆ ಮೂಲಗುರುವಾಗಿರುವ ಪರಮೇಶ್ವರನು ಎಲ್ಲೆಲ್ಲಿಯೂ ವ್ಯಾಪಕನಾಗಿರು

ತ್ತಾನೆ. ಆತನ ಆಜ್ಞೆಯನ್ನು ಪ್ರೇಮದಿಂದ ಪರಿಪಾಲಿಸುವದೇ ತಮ್ಮ ಜೀವನದ ಸಾರವೆಂದುತಿಳಿದುಕೊಂಡಿರುವ ಪರಿಶುದ್ಧಾತ್ಮರು ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಸಂಚರಿಸುತ್ತಿರುತ್ತಾರೆ. ಈ ಲೋಕದಲ್ಲಿ ಭಗವದ್ಭಕ್ತರಾದ ಸಾಧುಗಳು ಇಲ್ಲವೇ ಇಲ್ಲವೆಂಬ ಕಾಲವೇ ಇರುವದಿಲ್ಲ; ಅವರನ್ನು ಕಾಪಾಡಿ ಧರ್ಮವನ್ನು ಸ್ಥಾಪಿಸುವದಕ್ಕೆಂದೇ ಭಗವಂತನು ಆಗಾಗ್ಗೆ ಭೂಲೋಕದಲ್ಲಿ ಅವತರಿಸುತ್ತಾನೆಂದು ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಆದಕಾರಣ ನಾವು ಸದ್ಗುರುವನ್ನು ಹುಡುಕಿಕೊಂಡು ಹೊರಡುವ ಕಷ್ಟತರವಾದ ಪ್ರಯತ್ನವನ್ನು ಕೈಬಿಟ್ಟು ಸಚ್ಛಿಷ್ಯನ ಲಕ್ಷಣಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಮಾಡುತ್ತಾ ನಮ್ಮ ಅಭಿವೃದ್ಧಿಗೆ ತಕ್ಕ ಉಪದೇಶವನ್ನು ಕೊಡಬಲ್ಲ ಸದ್ಗುರುವನ್ನು ದಯಪಾಲಿಸೆಂದು ಆ ಭಗವಂತನನ್ನು ದಿನದಿನವೂ ಪ್ರಾರ್ಥಿಸುತ್ತಿರಬೇಕು. ಹಾಗೆ ಮಾಡಿದರೆ ತಕ್ಕ ಸಮಯದಲ್ಲಿ ನಮಗೆ ಸದ್ಗುರುವು ದರ್ಶನವನ್ನು ಕೊಟ್ಟು ಉದ್ಧಾರಮಾಡಿಯೇ ಮಾಡುವನು.

**ಶಿಷ್ಯನಾಗುವದಕ್ಕೆ ಸಂಪಾದಿಸಬೇಕಾದ ಗುಣಗಳು** ಯಾವವೆಂಬುದನ್ನು ಈಗ ವಿಚಾರಮಾಡೋಣ. ಯಾವ ಗುಣಗಳು ಬೆಳೆದರೆ ಸತ್ಪುರುಷರ ಸಹವಾಸವು ದೊರಕೀತೋ ಯಾವ ಗುಣಗಳಿರುವವನಿಗೆ ಇಂಥವರು ಸತ್ಪುರುಷರೆಂಬುದು ಸಹಜವಾಗಿಯೇ ಮನಸ್ಸಿಗೆ ತಿಳಿದೀತೋ ಅಂಥ ಗುಣಗಳನ್ನು ಸಾಧಕನು ಸಂಪಾದಿಸಿಕೊಳ್ಳಬೇಕೆಂಬುದು ಯುಕ್ತವಾಗಿದೆ. ಯಾವನಲ್ಲಿ ಎಂಥ ಸ್ವಭಾವವಿರುವದೋ ಅವನಲ್ಲಿಗೆ ಅಂಥ ಸ್ವಭಾವದವರೇ ಸಹಜವಾಗಿ ಆಕರ್ಷಿತರಾಗುತ್ತಾರೆ. ಆದ್ದರಿಂದ ಯಾವನು ಸನ್ಮಾರ್ಗದಲ್ಲಿರುವನೋ ಅವನ ಬಳಿಗೇ ಸನ್ಮಾರ್ಗದಲ್ಲಿರುವವರು ಸೇರುವ ಸಂಭವವು ಹೆಚ್ಚಾಗಿರುವದು. ಅವನಿಗೇ ಸನ್ನಿಷ್ಠೆಯಲ್ಲಿರುವವರು ಇಂಥವರೆಂಬುದು ಥಟ್ಟನೆ ತಿಳಿಯುತ್ತದೆ. ಆದ್ದರಿಂದ ಅಧ್ಯಾತ್ಮಶಾಸ್ತ್ರಗಳಲ್ಲಿ ತತ್ತ್ವಸಾಕ್ಷಾತ್ಕಾರವನ್ನು ಮಾಡಿಕೊಂಡಿರುವವರ ಲಕ್ಷಣವನ್ನು ಹೇಗೆ ವರ್ಣಿಸಿರುತ್ತದೆಯೋ ಹಾಗೆ ತಾನೂ ಇರುವದಕ್ಕೆ ಪ್ರಯತ್ನಿಸಬೇಕು. ಸ್ಥಿತಪ್ರಜ್ಞನು, ಭಕ್ತನು, ಗುಣಾತೀತನು-ಮುಂತಾದ ಹೆಸರಿನಿಂದ ಕೃತಾರ್ಥರಾದವರ ವರ್ಣನೆಯನ್ನು ಭಗವದ್ಗೀತೆಯೇ ಮುಂತಾದ ಶಾಸ್ತ್ರಗಳಲ್ಲಿ ಕೊಟ್ಟಿರುತ್ತದೆಯಷ್ಟೆ; ಆ ವರ್ಣನೆಯನ್ನು ಆಡಿಗಡಿಗೂ ಓದಿ ಅರ್ಥವನ್ನು ಅನುಸಂಧಾನ ಮಾಡುತ್ತಿರಬೇಕು. ಆ ತನ್ನ

ತಿಳಿವಳಿಕೆಯನ್ನು ಕೃತಿಯಲ್ಲಿ ತರುವದಕ್ಕೆ ಮನಃ ಪೂರ್ವಕವಾದ ಪ್ರಯತ್ನವನ್ನು ಮಾಡುತ್ತಿರಬೇಕು.

ಸಾಧುವರ್ತನದ ಸಿದ್ಧಿಗೆ ವಿಘ್ನಕಾರಿಯಾದ ನಡತೆಗಳನ್ನು ಮೊದಲು ಬಿಟ್ಟುಬಿಡಬೇಕು. ಅಂಥವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ತಿಳಿಸುವೆವು. **ಕೀರ್ತಿಕಾಮನೆಯನ್ನು ಎಲ್ಲಕ್ಕೂ ಮೊದಲು ಬಿಡಬೇಕು.** ಕೀರ್ತಿಯೆಂಬುದು ಆತುರದಿಂದ ಸಂಪಾದಿಸತಕ್ಕ ಗಂಟಲ್ಲ; ಅದು ತಾನೇ ಬರತಕ್ಕದ್ದು; ಒಂದು ವೇಳೆ ಸಿಕ್ಕಿದರೂ ಅದು ನಮ್ಮನ್ನು ಹಾದಿಯಲ್ಲಿ ಮುಗ್ಗರಿಸುವಂತೆ ಮಾಡುವದೇ ಹೊರತು ಅದರಿಂದ ನಮಗೆ ಮತ್ತೆ ಯಾವ ಪ್ರಯೋಜನವೂ ಆಗುವದಿಲ್ಲ. ಈ ಗುಟ್ಟನ್ನರಿಯದೆ ಕೆಲವರು ಬೇರೆಬೇರೆ ಸಂಘಗಳಲ್ಲಿ ಸಭಾಸದರಾಗುವರು; ಮತ, ಆಶ್ರಮ- ಮುಂತಾದವುಗಳನ್ನು ಸ್ಥಾಪಿಸುವದಕ್ಕೆ ಹೊರಡುವರು; ಸ್ಪರ್ಧೆಯಿಂದ ಶಾಸ್ತ್ರಾರ್ಥದ ಚರ್ಚೆಗಳನ್ನು ಮಾಡುವರು; ತಮಗೆ ತಿಳಿಯದ ವಿಷಯಗಳನ್ನು ಚರ್ಚಿಸುವ ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆಯುವದಕ್ಕೆ ಹೋಗುವರು. ನಿಜವಾಗಿಯೂ ಅಧ್ಯಾತ್ಮದ ಹಾದಿಯನ್ನು ತುಳಿಯಬೇಕೆಂದಿದ್ದರೆ ಸಾಧಕನು ಇಂಥವುಗಳ ಗೊಡವೆಗೆ ಹೋಗದೆ ಇರಬೇಕು. 'ಭಗವಂತನೆ, ನಾನು ಜನಗಳ ಕಣ್ಣಮುಂದೆ ಗಣನೆಗೆ ಬಾರದೆಯೇ ಅವರ ಸೇವೆಯನ್ನು ಮಾಡುವ ಮೂಲಕ ನಿನ್ನ ದಾಸನಾಗಿರುವಂತೆ ಅನುಗ್ರಹಮಾಡು' ಎಂದು ನಿತ್ಯವೂ ಬೇಡುತ್ತಿರಬೇಕು.

**ಲಾಭದ ಕಾಂಕ್ಷೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು.** ಈ ಲೋಕದಲ್ಲಿ ಆತ್ಮಲಾಭಕ್ಕಿಂತ ಹೆಚ್ಚಿನ ಲಾಭವಿಲ್ಲವೆಂಬ ನಿಶ್ಚಯವು ಸಾಧಕನ ಚಿತ್ತದಲ್ಲಿ ಮೂಡಿರಬೇಕು. 'ಇಂದು ಈ ಲಾಭವಾಯಿತು, ನಾಳೆ ಈ ಲಾಭವನ್ನು ಪಡೆದುಕೊಳ್ಳುವೆನು' ಎಂದು ಮನಸ್ಸಿನಲ್ಲಿ ಗುಣಿಸಿಕೊಳ್ಳುತ್ತಿರುವವನು ತನ್ನ ಲಾಭಕ್ಕಾಗಿಯೇ ಕಾಲವನ್ನೆಲ್ಲ ಕಳೆಯಬೇಕಾಗುವದು, ಅದಕ್ಕಾಗಿ ಮತ್ತೊಬ್ಬರನ್ನು ವಂಚಿಸಬೇಕಾಗುವದು. ಕೆಲವು ವೇಳೆ ಅವರನ್ನು ಹಿಂಸಿಸಲೂಬೇಕಾಗುವದು.

ಅಧ್ಯಾತ್ಮವಿಚಾರಕ್ಕೆ ಮನವೊಲಿಯಬೇಕಾದರೆ ಸಾಧಕನು **ಪೂಜಾಕಾಮನೆಯನ್ನು** ಬಿಡಬೇಕು. ತಾನು ಎಲ್ಲರಮೇಲೂ ಅಧಿಕಾರವನ್ನು ನಡೆಯಿಸಬೇಕೆಂದು ಹಾರೈಸುವದು, ಹಿರಿಯರನ್ನು ಏನೂ ಅರಿಯದವರೆಂದು ಧಿಕ್ಕರಿಸುವದು, ತಾನು ಸತ್ಪುರುಷನೆಂದೂ ಮಿಕ್ಕವರು ಅಸತ್ಪುರುಷರೆಂದೂ ನಂಬುವದು, ತಾನು ಹಿಡಿದ

ಕಾರ್ಯಗಳು ಕೆಲವು ಸೆರವೇರಿದ್ದರಿಂದಲೂ ತಾನು ಹೇಳಿದ ಮಾತಿನಂತೆ ಘಟನೆಗಳು ನಡೆದುಬಂದದ್ದರಿಂದಲೂ ಉಬ್ಬಿ ತಾನು ಸಿದ್ಧಪುರುಷನೆಂದೇ ಹೆಮ್ಮೆಪಡುವದು, ಸಭೆಗಳಲ್ಲಿ ಉಚ್ಚಾಸನವನ್ನು ಅಪೇಕ್ಷಿಸುವದು, ಶಿಷ್ಯರನ್ನು ಕೂಡಿ ಹಾಕುವದಕ್ಕೆ ಹವಣಿಸುವದು- ಇವೆಲ್ಲವೂ ರಾಜಸಗುಣವು ಹೊರಹೊಮ್ಮಿ ಕೊಂಡದ್ದರ ಗುರುತೆಂದು ಖಂಡಿತವಾಗಿ ತಿಳಿಯಬೇಕು. ಇವುಗಳಿರುವವರೆಗೆ ಸದ್ಗುರುವಿನ ದರ್ಶನಲಾಭವು ಎಂದಿಗೂ ದೊರೆಯಲಾರದು.

ಮುಖ್ಯವಾಗಿ **ತ್ರಿಕರಣಗಳನ್ನು ಪರಿಶುದ್ಧವಾಗಿಟ್ಟುಕೊಂಡು ಅವುಗಳನ್ನು ಭಗವತ್ಕಾರ್ಯದಲ್ಲಿಯೇ ವಿನಿಯೋಗಿಸುತ್ತಿರಬೇಕು.** ಶರೀರದಿಂದ ಮಾಡುವ ಕೆಲಸವೆಲ್ಲವೂ ಭಗವಂತನಿಗೆ ಅರ್ಪಣೆಯಾಗುವ ನಿಷ್ಕಾಮಕರ್ಮವಾಗಿರಬೇಕು. ಬಾಯಿಯಲ್ಲಿ ಯಾವಾಗಲೂ ಪ್ರಿಯ ಹಿತ ಸತ್ಯ ವಚನಗಳೂ ಭಗವಂತನ ನಾಮೋಚ್ಚಾರಣೆಯೂ ನಡೆದಿರಬೇಕು; ಸಚ್ಛಾಸ್ತ್ರಗಳ ಪಾರಾಯಣವು ಸಾಗಿರಬೇಕು. ಮನಸ್ಸಿನಲ್ಲಿ ಪರೋಪಕಾರಬುದ್ಧಿ, ಎಲ್ಲರಲ್ಲಿಯೂ ಯಥಾಯೋಗ್ಯವಾದ ಪ್ರೀತಿ, ಸರ್ವತ್ರ ಭಗವದ್ಭಾವನೆ- ಇವುಗಳಿರಬೇಕು; ಸಂಪತ್ತುವಿಪತ್ತುಗಳಲ್ಲಿ ಒಂದೇ ಸಮನಾಗಿರುವದು, ದುರ್ವಾಸನೆಗಳನ್ನು ಶುಭವಾಸನೆಗಳಿಂದ ಪ್ರತೀಕಾರ ಮಾಡುವದು- ಈ ಅಭ್ಯಾಸವು ನಡೆದಿರಬೇಕು; ಏಕಾಂತವಾಸದಲ್ಲಿ ರುಚಿ, ಭಗವಂತನ ಧ್ಯಾನದಲ್ಲಿ ತತ್ಪರತೆ, ಇಷ್ಟನಿಷ್ಠೆ- ಇವುಗಳು ತಪ್ಪದೆ ನಡೆಯುತ್ತಿರಬೇಕು.

## ೬

ಸನ್ಮಾರ್ಗದಲ್ಲಿ ಬಿಡದೆ ನಡೆಯುತ್ತಿರುವ ಸಾಧಕನಿಗೆ ಯೋಗ್ಯವಾದ ಕಾಲದಲ್ಲಿ ಅವನನ್ನು ಮುಂದಕ್ಕೆ ಒಯ್ಯುವ ಸಮರ್ಥನಾದ ಸದ್ಗುರುವು ಅವಶ್ಯವಾಗಿ ದರ್ಶನ ಕೊಡುತ್ತಾನೆ; **ಪೂರ್ಣಾನುಗ್ರಹ**ದಿಂದ ಕೃತಕೃತ್ಯನನ್ನಾಗಿ ಮಾಡಿಯೇ ತೀರುತ್ತಾನೆ.

ಸದ್ಗುರುವಿನಿಂದ ಆಗುವ ಅನುಗ್ರಹವನ್ನು ಈ ನಿಬಂಧದ ಮೊದಲಿನಲ್ಲಿಯೇ ಸಂಗ್ರಹವಾಗಿ ತಿಳಿಸಿರುತ್ತೇವೆ; ಶಕ್ತಿಪಾತ, ಗ್ರಂಥಿಭೇದ- ಎಂಬ ಎರಡು ದಿವ್ಯತರವಾದ ಲಾಭಗಳು ಸದ್ಗುರುವಿನ ಅನುಗ್ರಹದಿಂದ ಶಿಷ್ಯನಿಗೆ ಆಗುತ್ತವೆ.

**ಶಕ್ತಿಪಾತ**ವೆಂದರೆ ಸದ್ಗುರುವು ಒಂದಾನೊಂದು ದಿನ ನಡೆಯಿಸುವ ಯಾವದೋ ಒಂದು ಅದ್ಭುತಚಮತ್ಕೃತಿಯೆಂದು ಭಾವಿಸಬಾರದು. ಸದ್ಗುರು

ವೆಂಬಾತನು ಆಧ್ಯಾತ್ಮಶಕ್ತಿಯಿಂದ ಪ್ರೇರಿತವಾಗಿರುವ ಒಂದಾನೊಂದು ಯಂತ್ರ, ವಿಶೇಷದಂತೆ ಇರುತ್ತಾನೆ. ವಿದ್ಯುಚ್ಛಕ್ತಿಯು ಬ್ಯಾಟರಿಯೆಂಬ ಮೂಲಸ್ಥಾನಕ್ಕೆ ಸಂಬಂಧ ಪಟ್ಟಿರುವ ತಂತಿಗಳ ಮೂಲಕ ಅದರ ಸಂಬಂಧವಿರುವ ಮತ್ತೊಂದು ಕಡೆಗೂ ಆ ಶಕ್ತಿಯು ಪ್ರವಹಿಸುವಂತೆ ಸದ್ಗುರುವಿನಿಂದ ಆಧ್ಯಾತ್ಮಿಕಶಕ್ತಿಯು ಯೋಗ್ಯನಾದ ಶಿಷ್ಯನಲ್ಲಿಗೆ ಪ್ರವಹಿಸುತ್ತದೆ. ಈ ಪ್ರವಾಹಕ್ಕೆ ಬೇಕಾದ ಗುರುಭಕ್ತಿಯೆಂಬ ಸಂಬಂಧವನ್ನು ಶಿಷ್ಯನು ಕಲ್ಪಿಸಿಕೊಂಡಿರಬೇಕು. ದೀರ್ಘ ದಂಡನಮಸ್ಕಾರ, ಸೇವೆ, ಉಪಚಾರ - ಮುಂತಾದ ಬಾಹ್ಯದ ನಡತೆಗಳೂ ಶ್ರದ್ಧೆ, ಅಧ್ಯಾತ್ಮಜ್ಞಾನದಲ್ಲಿ ತತ್ಪರತೆ, ಇಂದ್ರಿಯ ನಿಗ್ರಹ- ಮುಂತಾದ ಒಳಗಿನ ನಡತೆಗಳೂ ಈ ಸಂಬಂಧಕ್ಕೆ ಮುಖ್ಯಸಹಕಾರಿಗಳಾಗಿರುತ್ತವೆ. ವಿದ್ಯುದ್ದೀಪದ ತಂತಿಗಳನ್ನು ನಮ್ಮ ಮನೆಯವರೆಗೂ ಇಳಿಸಿಕೊಂಡು ದೀಪದ ಪ್ರಕಾಶಕ್ಕೆ ತಕ್ಕ ಬಲ್ಬುಗಳೆಂಬ ಗಾಜಿನಬುರುಡೆಗಳನ್ನು ಅಲ್ಲಲ್ಲಿಗೆ ಭೌತಿಕ ಶಾಸ್ತ್ರವಿಧಿಗನುಸಾರವಾಗಿ ಜೋಡಿಸಿಕೊಂಡರೆ ವಿದ್ಯುದ್ಯಂತ್ರದ ಗುಂಡಿಯನ್ನು ಒತ್ತಿದಮಾತ್ರದಿಂದ ವಿದ್ಯುಚ್ಛಕ್ತಿಯು ಮೂಲಸ್ಥಾನದಿಂದ ನಮ್ಮ ಮನೆಯವರೆಗೂ ಹರಿದುಬಂದು ದಿವ್ಯತರವಾದ ಬೆಳಕಾಗಿ ಕಾಣಿಸಿಕೊಳ್ಳುವ ಹಾಗೆಯೇ ಸದ್ಗುರುವಿನ ಕರುಣೆಯ ತಂತಿಗಳನ್ನು ನಮ್ಮೊಳಕ್ಕೆ ತಂದುಕೊಂಡು ನಮ್ಮ ಹೃದಯವೆಂಬ ಸ್ವಚ್ಛವಾದ ಬಲ್ಬನ್ನು ಅವಕ್ಕೆ ಜೋಡಿಸಿಕೊಳ್ಳಬೇಕು; ಆಗ ಚಿತ್ತವನ್ನು ಹೃದಯದ ಕಡೆಗೆ ತಿರುಗಿಸಿದ ಮಾತ್ರದಿಂದ ಹೃದಯದಲ್ಲಿ ದಿವ್ಯತರವಾದ ಆಧ್ಯಾತ್ಮಪ್ರಕಾಶವು ಕಾಣಿಸಿಕೊಳ್ಳುವದು. ನಮ್ಮ ಮುಖದ ಮೂಲಕವಾಗಿಯೂ ಬ್ರಹ್ಮತೇಜಸ್ಸಿನ ರೂಪದಲ್ಲಿ ಅದು ಸುತ್ತಲೂ ಹರಡಿಕೊಂಡು ನಮ್ಮ ಸುತ್ತ ಮುತ್ತಲಿನವರ ಅಜ್ಞಾನಾಂಧಕಾರವನ್ನು ಕಳೆಯುವದಕ್ಕೆ ಸಾಧನವಾಗುವವದು. ಇದೇ **ಶಕ್ತಿಪಾತವು.**

ಆಮೇಲೆ ನಮ್ಮ ಮನಸ್ಸಿನಲ್ಲಿ ಒಂದು ಹೊಸ ಬಗೆಯ ಮಾರ್ಪಾಡು ಉಂಟಾಗಿಬಿಡುತ್ತದೆ. ಮೊದಲು ನಾವು ಎಷ್ಟುಪ್ರಯತ್ನಪಟ್ಟರೂ ನಮ್ಮ ಮಾತನ್ನು ಕಿವಿಗೆ ಹಾಕಿಕೊಳ್ಳದೆ ವಿಷಯಗಳ ಕಡೆಗೆ ಹರಿಯುತ್ತಿದ್ದ, ಅಥವಾ ದುರ್ವಾಸನೆಗಳಿಂದ ರಾಗ, ದ್ವೇಷ, ಭಯ, ಕಾಮ, ಕ್ರೋಧ, ಮೋಹ, ಮದ, ಮಾತ್ಸರ್ಯ, ಸಂಶಯ; ದುರ್ವ್ಯಸನ, ದುರ್ಮನಸ್ಕ, ದಾರಿದ್ರ್ಯ, ಋಣ, ರೋಗ, ದುಃಖ- ಮುಂತಾದವುಗಳನ್ನೇ ಚಿಂತಿಸಿಕೊಂಡು ವ್ಯಥೆಪಡುತ್ತಿದ್ದ ನಮ್ಮ ಮನಸ್ಸು ಇನ್ನು ಮೇಲೆ ವೈರಾಗ್ಯ, ಪ್ರೇಮ, ಧೈರ್ಯ, ತೃಪ್ತಿ, ಶಾಂತಿ, ಔದಾರ್ಯ, ವಿಜ್ಞಾನ,

ಅಮಾನಿತ್ವ, ಪರೋಪಕಾರ, ನಿಶ್ಚಯ, ಸದ್ವಿಚಾರ, ಸೌಮನಸ್ಯ, ಸೌಭಾಗ್ಯ, ಸಂಪತ್ತು, ಸ್ವಾಸ್ಥ್ಯ, ಆನಂದ- ಮುಂತಾದ ಶುಭ ವಾಸನೆಗಳ ಚಿಂತನೆಯಲ್ಲಿಯೇ ಮಗ್ನವಾಗಿ ನಮ್ಮ ಸಂಬಂಧದಲ್ಲಿರುವವರಿಗೂ ಇಂಥ ವಾಸನೆಗಳನ್ನೇ ಹಬ್ಬಿಸುವ ಮೂಲಸ್ಥಾನವಾಗಿಬಿಡುತ್ತದೆ. ಅಲ್ಲಿಂದ ಮುಂದಕ್ಕೆ ನಾವು ಬೇಡವೆಂದರೂ ಶ್ರದ್ಧಾಭಕ್ತಿಧ್ಯಾನಗಳಿಂದ ಭಗವಂತನ ಚಿಂತನೆಯಿಂದಲೇ ಕಾಲವನ್ನು ಕಳೆಯುತ್ತಾ ಆನಂದದಿಂದಿರುವಂತೆ ಮನಃಪ್ರವೃತ್ತಿಯುಂಟಾಗಿಬಿಡುತ್ತದೆ. ಇದೇ **ಗ್ರಂಥಿ ಭೇದವು.**

ಸದ್ಗುರುಗಳಲ್ಲಿ ಕೆಲವರು ತಾವು ಪುರಶ್ಚರಣೆಮಾಡಿ ಸಿದ್ಧಿಯನ್ನು ಪಡೆದುಕೊಂಡಿರುವ ಯಾವದಾದರೊಂದು **ಮಂತ್ರದ** ಮೂಲಕವಾಗಿ ಈ ಶಕ್ತಿಪಾತವನ್ನು ಮಾಡುತ್ತಾರೆ ; ಮತ್ತೆ ಕೆಲವರು ರಾಮಾಯಣ, ಭಾಗವತ ಭಗವದ್ಗೀತೆ- ಮುಂತಾದ **ಸದ್ಗ್ರಂಥ**ಗಳ ವಚನವನ್ನು ಈ ಕಾರ್ಯಕ್ಕೆ ಸಾಧನವಾಗಿ ಮಾಡಿಕೊಳ್ಳುತ್ತಾರೆ; ಇನ್ನೂ ಕೆಲವರು ಕೇವಲ ತಮ್ಮ ಸಂಭಾಷಣೆಯಿಂದಲೇ ನಮ್ಮ ಮೋಹವೆಲ್ಲವನ್ನೂ ಕಳೆಯುತ್ತಾರೆ. ಆದರೆ ಸದ್ಗುರುವಿನ ಅನುಗ್ರಹವು ಆಯಿತೆಂಬುದಕ್ಕೆ ನಮಗೆ ದೊರೆತ ಮಂತ್ರವಾಗಲಿ, ದೀಕ್ಷೆಯಾಗಲಿ, ಗ್ರಂಥವಾಗಲಿ- ಎಂದಿಗೂ ಸಾಕ್ಷಿಯಲ್ಲ; ನಮ್ಮ ಅಧ್ಯಾತ್ಮಶಕ್ತಿಯು ಎಷ್ಟರಮಟ್ಟಿಗೆ ಉತ್ತೇಜನದಿಂದ ಬೆಳೆಯಿತು, ನಮಗೆ ಭಕ್ತಿವೈರಾಗ್ಯಗಳ ಸಂಪತ್ತು ಎಷ್ಟರಮಟ್ಟಿಗೆ ವಶವಾಯಿತು, ನಮ್ಮ ಜೀವನವು ಮೊದಲಿಗಿಂತ ಎಷ್ಟರಮಟ್ಟಿಗೆ ಹೆಚ್ಚು ಸಂತೋಷಗಳಿಂದ ಸಾಗುವದಕ್ಕೆ ಮೊದಲಾಯಿತು?- ಎಂಬುದೇ ಅದಕ್ಕೆ ಸಾಕ್ಷಿಯಾಗಿರುತ್ತದೆ. ಇಂಥ ಸದ್ಗುರುವಿನ ದರ್ಶನ, ಸ್ಪರ್ಶನ, ಸೇವೆ, ಸಂಭಾಷಣ ಸೌಭಾಗ್ಯವು ಈ ಪುಟ್ಟ ಗ್ರಂಥವನ್ನು ಮನಮುಟ್ಟಿ ಓದುವವರೆಲ್ಲರಿಗೂ ದೊರೆಯುವಂತೆ ಅನುಗ್ರಹಿಸೆಂದು ಸರ್ವರಿಗೂ ಮೂಲಗುರುವಾಗಿರುವ ಆ ಭಗವಂತನನ್ನು ಪ್ರಾರ್ಥಿಸಿ ಆತನ ನಮಸ್ಕಾರ ವಚನದಿಂದ ಈ ಬರವಣಿಗೆಯನ್ನು ಉಪಸಂಹಾರಮಾಡುವೆವು.

**ಬ್ರಹ್ಮಾನನ್ದಂ ಪರಮಸುಖದಂ ಕೇವಲಂ ಜ್ಞಾನಮೂರ್ತಿಂ**
**ದ್ವನ್ದ್ವಾತೀತಂ ಗಗನಸದೃಶಂ ತತ್ತ್ವಮಸ್ಯಾದಿಲಕ್ಷ್ಯಮ್ ।**
**ಏಕಂ ನಿತ್ಯಂ ವಿಮಲಮಚಲಂ ಸರ್ವಧೀಸಾಕ್ಷಿಭೂತಂ**
**ಭಾವಾತೀತಂ ತ್ರಿಗುಣರಹಿತಂ ಸದ್ಗುರುಂ ತನ್ನಮಾಮಿ ॥**

# ಕೆಲವು ಸ್ತೋತ್ರಗಳು

೧. **ಗಣೇಶಾಷ್ಟಕ :** ಗಣೇಶಪುರಾಣದಿಂದ ಆರಿಸಿದ ಸ್ತೋತ್ರ, ಪ್ರಪಂಚವೆಲ್ಲವೂ ಬ್ರಹ್ಮವೇ ಎಂಬ ಸಿದ್ಧಾಂತವನ್ನು ಮನೋಹರರೀತಿಯಿಂದ ವಿವರಿಸಿದೆ.

೨. **ಶಿವನಾಮಾಷ್ಟೋತ್ತರಶತಕ:** ಶಿವರಹಸ್ಯದಲ್ಲಿರು ಗೌರೀನಾರಾಯಣ ಸಂವಾದ ರೂಪವಾದ ಸ್ತೋತ್ರವಿದು. ಅರ್ಥವಿವರಣೆ ಸಹಿತವಾಗಿದೆ. ಅಷ್ಟೋತ್ತರ ಶತನಾಮಾವಳಿಯನ್ನೂ ಕೊಟ್ಟಿದೆ.

೩. **ಶಿವಮಹಿಮ್ನ : ಸ್ತೋತ್ರ, :** ಶಿವಭಕ್ತರಿಗೆಲ್ಲ ಪ್ರಿಯವಾಗಿರುವ ಪುಷ್ಪದಂತ ವಿರಚಿತವಾದ ಈ ಸ್ತೋತ್ರವು ಮೂಲ, ಪ್ರತಿಪದಾರ್ಥ, ತಾತ್ಪರ್ಯ, ವಿವರಣೆ ಗಳೊಡನೆ ಕೂಡಿದೆ.

೪. **ಶಿವಾನಂದಲಹರೀ :** ಹೆಸರಿಗೆ ತಕ್ಕಂತೆ ಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಈ ಸ್ತೋತ್ರವು ಮೂಲ, ವಿವರಣೆ ಸಮೇತವಾಗಿದೆ.

೫. **ಮೂಲರಾಮಾಯಣಮ್ :** ಶ್ರೀಮದ್ವಾಲ್ಮೀಕಿರಾಮಾಯಣದ ಬಾಲ ಕಾಂಡದ ಮೊದಲನೆಯ ಸರ್ಗವನ್ನು ಮೂಲ, ಕನ್ನಡ ಅನುವಾದ ಸಮೇತ ಕೊಡಲಾಗಿದೆ. ರಾಮಾಯಣದ ಪೂರ್ಣಕಥೆಯು ಸಂಕ್ಷೇಪವಾಗಿದೆ.

೬. **ಅಧ್ಯಾತ್ಮಗೀತಾವಳಿ :** ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿ ಗಳವರು ತಮ್ಮ ಪೂರ್ವಾಶ್ರಮದಲ್ಲಿ ರಚಿಸಿದ ಕೆಲವು ಅಧ್ಯಾತ್ಮ ವಿಚಾರ ಬೋಧಕವಾದ ಹಾಡುಗಳ ಸಂಕಲನವೇ ''ಅಧ್ಯಾತ್ಮಗೀತಾವಳಿ.'' ಪೂಜ್ಯಶ್ರೀ ಗಳವರು ಬೋಧಿಸುತ್ತಿದ್ದ ಸರಳ ಶಂಕರವೇದಾಂತಪ್ರಕ್ರಿಯೆಯ ಮರ್ಮ ವನ್ನೆಲ್ಲ ಹಾಡುಗಳ ರೂಪದಿಂದ ಇಲ್ಲಿ ಅಳವಡಿಸಲಾಗಿದೆ. ಅರ್ಥಗರ್ಭಿತ ವಾಗಿಯೂ ಮತ್ತು ಜ್ಞಾನಭಕ್ತಿಗಳ ಸಂಗಮವುಳ್ಳದ್ದಾಗಿಯೂ ಸಂಗೀತ ಮಾಧ್ಯಮಕ್ಕೆ ಅಳವಡಿಸಿ ಕೊಳ್ಳಲು ಅನುಕೂಲವಾಗಿದೆ. (ಧ್ವನಿ ಸುರಳಿ ಗಳಲ್ಲಿಯೂ ಲಭ್ಯವಿದೆ).

೭. **ಆತ್ಮಬೋಧ :** ಆತ್ಮನು ನಿತ್ಯಶುದ್ಧಬುದ್ಧಮುಕ್ತ ಸ್ವಭಾವನೆಂಬುದನು ಬಗೆ ಬಗೆಯ ಉಪಮಾನಗಳಿಂದ ತಿಳಿಸಿದೆ.

೮. **ಸವಾರ್ತಿಕಪಂಚೀಕರಣ :** ಪಂಚೀಕರಣಕ್ಕೂ ವಾರ್ತಿಕಕ್ಕೂ ಭಾವಾರ್ಥ ವನ್ನು ಕೊಟ್ಟು ಟಿಪ್ಪಣಿಗಳಲ್ಲಿ ವಿಚಾರಪ್ರಚೋದಕವಾದ ಅನೇಕ ವಿಷಯ ಗಳನ್ನು ಸೇರಿಸಿದೆ.

---

ಪುಸ್ತಕಗಳ ಪೂರ ಬೆಲೆ ಪಟ್ಟಿಗೆ ಬರೆದುಕೊಳ್ಳಿರಿ.

**ಅಧ್ಯಾತ್ಮ ಪ್ರಕಾಶ ಕಾರ್ಯಾಲಯ , ಹೊಳೆನರಸೀಪುರ - 573211**

# ನಮ್ಮ ಗ್ರಂಥಗಳು ದೊರೆಯುವ ಸ್ಥಳಗಳು

1. **ಅಧ್ಯಾತ್ಮಪ್ರಕಾಶಕಾರ್ಯಾಲಯ**
ತ್ಯಾಗರಾಜನಗರ, ಬೆಂಗಳೂರು - 560 028, ದೂ : 625548
2. **ವೇದಾಂತ ಬುಕ್‌ಹೌಸ್,**
92, 6ನೇ ಮೈನ್, (ಉಮಾ ಚಿತ್ರಮಂದಿರದ ಹತ್ತಿರ) ಚಾಮರಾಜಪೇಟೆ
ಬೆಂ- 18, ದೂರವಾಣಿ : 607590
3. **ನ್ಯೂ ವೇದಾಂತ ಬುಕ್ ಹೌಸ್**
ಆರ್.ಕೆ. ಪ್ಲಾಜಾ,
8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003
4. **ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್**
ಪುಸ್ತಕ ವ್ಯಾಪಾರಿಗಳು, ಚಿಕ್ಕಪೇಟೆ, ಬೆಂಗಳೂರು - 560 053
ದೂರವಾಣಿ : 225817
5. **ಗೀತಾ ಏಜನ್ಸೀಸ್,**
ಬುಕ್ ಸೆಲರ್ಸ್, ಬಳೇಪೇಟೆ ಚೌಕ, ಬೆಂಗಳೂರು - 560 053.
6. **ಸಪ್ನಾ ಬುಕ್‌ಸ್ಟಾಲ್,**
ತ್ರಿಭುವನ್ ಚಿತ್ರಮಂದಿರದ ಎದುರು, ಗಾಂಧಿನಗರ,
ಬೆಂಗಳೂರು-9 ದೂರವಾಣಿ : 6612730
7. **ರಾಷ್ಟ್ರೋತ್ಥಾನ ಸಾಹಿತ್ಯ**
ಕೇಶವಶಿಲ್ಪ, ಕೆಂಪೇಗೌಡ ನಗರ, ಬೆಂಗಳೂರು - 560 019,
ದೂರವಾಣಿ : 2271889
8. **ಸಾಹಿತ್ಯ ಸಿಂಧು ಪ್ರಕಾಶನ**
14/3ಎ, ನೃಪತುಂಗ ರಸ್ತೆ, ಬೆಂಗಳೂರು - 01
ದೂರವಾಣಿ : 2271889
9. **ಗೀತಾ ಬುಕ್ ಹೌಸ್,**
ನ್ಯೂ ಸ್ಟಾಚ್ಯು ಸ್ಕ್ವೇರ್, ಮೈಸೂರು - 570 001
ದೂರವಾಣಿ : 427704
10. **ಮೆಸರ್ಸ್ ಸಮಾಜ ಪುಸ್ತಕಾಲಯ,**
ಶಿವಾಜಿ ಬೀದಿ, ಧಾರವಾಡ - 580 001
ದೂರವಾಣಿ : 4271889
11. **ಶ್ರೀವಿದ್ಯಾಭಾರತಿ ಬುಕ್ಸ್ ಸೆಂಟರ್,**
ಭಾರತಿ ಬೀದಿ, ಶೃಂಗೇರಿ 577 139
ದೂರವಾಣಿ : 08265 - 62323